ಶ್ರೀ ಎಸ್. ಪಿ. ಮುದ್ದಹನುಮೇಗೌಡ :- ಇವತ್ತು ಏನಾಗಿದೆ ಎಂದರೆ ರಾಜ್ಯದ ಕಬ್ಬುಬೆಳೆಗಾರರನ್ನು ಕಾರ್ಮೋಡ ಮುಸುಕಿದೆ ಕೇಂದ್ರ ಸರ್ಕಾರ ಇವತ್ತು ಅನ್ಯಾಯ ಮಾಡುತ್ತಿದೆ. ದಯಮಾಡಿ ಕೇಂದ್ರ ಸರ್ಕಾರ ಈ ರೀತಿ ಮಲತಾಯಿ ಧೋರಣೆಯನ್ನು ಮಾಡದೆ.....

ಗೊಂದಲ

ಅಧ್ಯಕ್ಷರು :- ಯಾರಾದರೂ ಒಬ್ಬರು ಮಾತನಾಡಿ ಎಲ್ಲರೂ ಮಾತನಾಡಿದರೆ ಅವರುಬ ಬರೆದುಕೊಳ್ಳುವುದಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ಇವತ್ತು ನಮ್ಮ ರಾಜ್ಯದ ಕಬ್ಬು ಬೆಳೆಗಾರರಿಗೆ ಏನೂ ಸಹಾಯ ಮಾಡದೇಹೋದರೆ, ನಾವು ಸುಮ್ಮನೆ ಕುಳಿತುಕೊಂಡರೆ ಕಬ್ಬು ಬೆಳೆಗಾರರು ನಮಗೆ ಶಾಪ ಹಾಕುತ್ತಾರೆ.

ಗೊಂದಲ

ಅಧ್ಯಕ್ಷರು :- ನಮ್ಮ ಮುಂದೆ ಮೋಶನ್ ಏನಿದೆ ಅದನ್ನು ಮುಕ್ತಾಯ ಮಾಡೋಣ. ಹತ್ತು ನಿಮಿಷದಲ್ಲಿ ಅದು ಮುಗಿಯುತ್ತದೆ. ಆಮೇಲೆ ನೀವೇ ಪ್ರಸ್ತಾಪ ಮಾಡುವಿರಂತೆ.

4. ವಿಷಯ:- ನಿಯಮ 159ರ ಮೇಲಿನ ಪ್ರಸ್ತಾವದ ಚರ್ಚೆ (ಬರಗಾಲಕ್ಕೆ ಸಂಬಂಧಪಟ್ಟಂತೆ)

+ **ಶ್ರೀ ಜಗದೀಶ್ ಶೆಟ್ಟರ್** :- ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಈಗಾಗಲೇ ಕೆಲವೊಂದು ವಿಷಯಗಳ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟರು. ನಾವೇನು ಈ ಬರಗಾಲ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿದ್ದೆವು. ಬರಗಾಲ ಕಾಮಗಾರಿಗಳ ಬಗ್ಗೆ ಏನು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆವು. ಅದರ ಬಗ್ಗೆ ಹಲವಾರು ಮಾಹಿತಿಗಳನ್ನು ಅವರು ಕೊಟ್ಟರು. ಆದರೆ ಮುಖ್ಯವಾಗಿ ಯಾವ ವಿಷಯದ ಬಗ್ಗೆ ಅವರು ಹೇಳಬೇಕಾಗಿತ್ತು ಮತ್ತು ಸ್ಪಷ್ಟೀಕರಣವನ್ನು ಕೊಡಬೇಕಾಗಿತ್ತು ಆ ವಿಷಯಗಳ ಬಗ್ಗೆ ಅವರು ಸ್ಪಷ್ಟೀಕರಣವನ್ನು ಕೊಟ್ಟಿಲ್ಲ. ಹಲವಾರು ಪ್ರಾಮುಖ್ಯವಾದಂಥ ಇಶ್ಯುಗಳನ್ನು ನಾವು ಎತ್ತಿದ್ದೆವು. ಮೊದಲನೆಯದಾಗಿ ಈ ಬರಗಾಲ ಕಾಮಗಾರಿಗಳಲ್ಲಿ ನಡೆದಂಥ ಅವ್ಯವಹಾರಗಳ ಬಗ್ಗೆ ನಾವು ಪ್ರಸ್ತಾಪ ಮಡಿದ್ದೆವು. ಅದರ ಬಗ್ಗೆ ಏನೋ ಇಪ್ಪತ್ತು-ಮೂವತ್ತು ಕೇಸುಗಳನ್ನು.....

ಅಧ್ಯಕ್ಷರು :- ಮೂವತ್ತೈದು ಅಂತ ಅವರು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- 35 ಕೇಸ್‌ಗಳು ಬುಕ್ ಆಗಿವೆ. ಇಷ್ಟು ದೊಡ್ಡ ಕೆಲಸ ಮಾಡುವುದಕ್ಕೆ ನಾವು ಹೊರಟಿದ್ದೇವೆ ಅಂತ ಹೇಳಿ ಅದನ್ನು vague ಆಗಿ ಇದರಲ್ಲಿ ಏನೂ ಅವ್ಯವಹಾರ ಆಗಿಯೇ ಇಲ್ಲ, ಏನೂ ನಡೆದೇ ಇಲ್ಲ ಎನ್ನುವ ಮಟ್ಟಿಗೆ ಅವರು ಮಾತನಾಡಿದರು. ಇವತ್ತು ನಾನು ಹೇಳುತ್ತೇನೆ. ಮಾನ್ಯ ಖರ್ಗೆಯವರು ಇನ್ನೂ ಬಂದಿಲ್ಲ.

ಅಧ್ಯಕ್ಷರು :- ಬರುತ್ತಾರೆ. He is on the way

ಗೊಂದಲ

ಶ್ರೀ ಎಂ.ಎಸ್. ಆತ್ಮಾನಂದ :- ಅಧ್ಯಕ್ಷರೇ.....

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೇ, ನಾನು ಯೀಲ್ಡ್ ಆಗಿಲ್ಲ. ಅವರು ಏಕೆ ಮಾತನಾಡುತ್ತಿದ್ದಾರೆ? ಆಮೇಲೆ ಬೇಕಾದರೆ ಅವರು ಮಾತನಾಡಲಿ.

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

Mr. Speaker:- Mr Atmanand, I will allow you.ಇದು ಐದು ನಿಮಿಷದಲ್ಲಿ ಮುಗಿಯುತ್ತದೆ ನೋಡಿ, ಶೆಟ್ಟರ್ ಅವರು ಸೋಮಶೇಖರ್, ಚೆನ್ನಪ್ಪ ಮತ್ತು ಸಿಂಧ್ಯ ಇವರು ನಾಲ್ಕು ಜನ ಮಾತ್ರ ಮಾತನಾಡುತ್ತಾರೆ ಅಷ್ಟೆ.

ಶ್ರೀ ಯು.ಆರ್. ಸಭಾಪತಿ :– ಬರಗಾಲದ ಬಗ್ಗೆ ಚರ್ಚೆ ಮುಗಿದುಹೋಗಿದೆ.

ಗೊಂದಲ

ಅಧ್ಯಕ್ಷರು :– ನಾನು ಶೆಟ್ಟರ್ ಅವರಿಗೆ ಅನುಮತಿ ಕೊಟ್ಟಿದ್ದೇನೆ. ಶೂನ್ಯ ವೇಳೆಯಲ್ಲಿ ನಿಮಗೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಯು.ಆರ್. ಸಭಾಪತಿ :– ಮಾನ್ಯ ಅಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು :– ನಾನು ವಿರೋಧ ಪಕ್ಷ ನಾಯಕರಿಗೆ ಅವಕಾಶ ಕೊಟ್ಟಿದ್ದೇನೆ. ಇನ್ನು ಹತ್ತು ನಿಮಿಷದಲ್ಲಿ ಇದು ಮುಗಿದುಹೋಗುತ್ತದೆ. ದಯವಿಟ್ಟು ಗಲಾಟೆ ಮಾಡಬೇಡಿ.

ಶ್ರೀ ಯು.ಆರ್. ಸಭಾಪತಿ :– ಬರಗಾಲದ ವಿಷಯ ಮುಗಿದುಹೋಗಿದೆ. ಈಗಾಗಲೇ ಅವರು ತಂದಿದ್ದ ತಿದ್ದುಪಡಿ ಬಿದ್ದುಹೋಗಿದೆ. ಇನ್ನು ಮಾತನಾಡಲಿಕ್ಕೆ ಏನಿದೆ? ತಾವು ನನಗೆ ಸ್ಪಷ್ಟೀಕರಣವನ್ನು ಕೊಡಬೇಕು.

ಅಧ್ಯಕ್ಷರು :– ತಿದ್ದುಪಡಿ ಮುಗಿದುಹೋಯಿತು. ಫೈನಲ್ ಮೋಶನ್ ಇದೆ. ತಿದ್ದುಪಡಿ ಬಿದ್ದುಹೋಯಿತು. ಬಿಡಿ ಇನ್ನು ಹತ್ತು ನಿಮಿಷದಲ್ಲಿ ಇದು ಮುಗಿದುಹೋಗಿಬಿಡುತ್ತದೆ ಇದು ನಿಮಗೆ ಅರ್ಥವೇ ಆಗುತ್ತಿಲ್ಲ.

ಶ್ರೀ ಯು.ಆರ್. ಸಭಾಪತಿ :– ಬರಗಾಲದ ಬಗ್ಗೆ ಎಲ್ಲಾ ಮುಗಿದುಹೋಗಿದೆ.

ಅಧ್ಯಕ್ಷರು :– ಸಭಾಪತಿಯವರೇ, ಅವರು ತಿದ್ದುಪಡಿ ಬಗ್ಗೆ ಮಾತನಾಡುತ್ತಿಲ್ಲ.

ಶ್ರೀ ಯು.ಆರ್. ಸಭಾಪತಿ :– ಬರಗಾಲದ ಬಗ್ಗೆ ಮಾತನಾಡಲಿಕ್ಕೆ ಇನ್ನು ಏನಿದೆ? ಇನ್ನು ಅದರ ಬಗ್ಗೆ ಮಾತನಾಡಲಿಕ್ಕೆ ಅವರಿಗೆ ಹಕ್ಕಿಲ್ಲ.

ಗೊಂದಲ

Mr. Speaker:- Mr. Sabhapathi please resume your seat. ಅವರು ತಿದ್ದುಪಡಿ ಬಗ್ಗೆ ಮಾತನಾಡುತ್ತಿಲ್ಲ ನಿಮಗೆ ನಾನು ಆಮೇಲೆ allow ಮಾಡುತ್ತೇನೆ. I have allowed Mr. Shetter, Leader of the Opposition. ನೀವು ದಯವಿಟ್ಟು ಮಧ್ಯದಲ್ಲಿ ಇಂಟರ್‌ಫಿಯರ್ ಮಾಡಬೇಡೊ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರಿಗೆ ನೀವು ಗೌರವ ಕೊಡಬೇಕು. Please resume your seat.

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಗಮನಕ್ಕೆ ನಾನು ಒಂದು ವಿಷಯವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. 23 ವರ್ಷಗಳ ಹಿಂದೆ 1980 ಇಸವಿ ಜುಲೈ 21 ರಂದು ನರಗುಂದದಲ್ಲಿ ರೈತರ ಬಂಡಾಯ ಆಗಿ ಸರ್ಕಾರ ರೈತರ ಮೇಲೆ ಗೋಲಿಬಾರ್ ಮಾಡಿ ಮೂರು ಜನ ರೈತರು ಹುತಾತ್ಮರಾದರು...

ಅಧ್ಯಕ್ಷರು :– ಅದಕ್ಕೂ ಈ ವಿಷಯಕ್ಕೂ ಸಂಬಂದ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಇವರು ಬರಗಾಲದ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸದೇ ಇದ್ದಂಥ ಸಂದರ್ಭದಲ್ಲಿ ಇವತ್ತು ರೈತರ ಆತ್ಮಹತ್ಯೆ ನಡೆದಿದೆ. ಮೊನ್ನೆ ಕೊಪ್ಪಳದ

ಹಿರೇಬಗನಾಳು ಗ್ರಾಮದಲ್ಲಿ ಪೋಲೀಸರ ಏನು ದೌರ್ಜನ್ಯ ಆಯಿತು. ಅದೇರೀತಿಯ ಘಟನೆ ಮರುಕಳಿಸುವ ಸಾದ್ಯತೆ ಇದೆ. ಹಿಂದೆ ನರಗುಂದದಲ್ಲಿ ಬಂಡಾಯ ಆಯಿತು...

ಅಧ್ಯಕ್ಷರು :– ನೀವು ವಿಷಯವನ್ನು ಮಿಕ್ಸ್‌ಆಫ್ ಮಾಡಬೇಡಿ.

ಗೊಂದಲ

ಶ್ರೀ ಬಿ.ಆರ್. ನೀಲಕಂಠಪ್ಪ :– ಅಧ್ಯಕ್ಷರೇ, ಇದು ಬರಗಾಲದ ಬಗ್ಗೆ ವಿಷಯ ಅಲ್ಲ.

ಅಧ್ಯಕ್ಷರು :– ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ನೀವು ಮಾತನಡುವಾಗ ಅವರು ಎದ್ದುನಿಂತರಾ? No, I can't allow you. ಅವರದ್ದು ಆದಮೇಲೆ ನೀವು ಮಾತನಾಡಿ.

ಶ್ರೀ ಬಿ.ಆರ್. ನೀಲಕಂಠಪ್ಪ :– ಅವರು ವಿಷಯ ಬಿಟ್ಟು ಬೇರೆ ವಿಷಯ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು :– ಅವರು ಆ ವಿಷಯದ ಬಗ್ಗೆಯೇ ಮಾತನಾಡುತ್ತಿದ್ದಾರೆ. ತಿದ್ದುಪಡಿ ಬೆಳಿಗ್ಗೆಯೇ ಬಿದ್ದುಹೋಗಿದೆ. ಇದರ ಬಗ್ಗೆ ನೀವು ಏಕೆ ಮಾತನಾಡುತ್ತಿದ್ದೀರಿ? I have allowed Mr. Shetter.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೇ, ಇದೇನೂ ನನಗೆ ಅರ್ಥವಾಗುವುದಿಲ್ಲ. ಜುಲೈ 21 ರಂದು 1980 ರಲ್ಲಿ ನಡೆದ ಘಟನೆಯ ನೆನಪನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಯಾವ ರೀತಿ ಅಂದು ನರಗುಂದದಲ್ಲಿ ರೈತರು ಬಂಡಾಯ ಎದ್ದರು, ಸರ್ಕಾರದ ವಿರುದ್ಧವಾಗಿ ಆವತ್ತೇನು ರೈತರು ಹುತಾತ್ಮರಾದರು. ಆ ರೈತರು ಏನು ತ್ಯಾಗವನ್ನು ಮಾಡಿದ್ದಾರೆ ಆವತ್ತಿನ ದಿವಸವನ್ನು ನಾವು ಇವತ್ತು ನೆನಪು ಮಾಡಿಕೊಳ್ಳಬೇಕಾಗುತ್ತದೆ. ರೈತರು ಇವತ್ತು ಸರ್ಕಾರದ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ. ಅದು ಬರಗಾಲದ ಕಾಮಗಾರಿಗಳು ಇರಬಹುದು, ಅವರಿಗೆ ಸಿಗಬೇಕಾದಂಥ ಸೌಲಭ್ಯಗಳು ಇರಬಹುದು, ಅಥವಾ ಸರ್ಕಾರ ಅವರ ನೆರವಿಗೆ ಬರಬೇಕು ಎನ್ನುವಂಥಾದ್ದು ಇರಬಹುದು, ಇದರ ಬಗ್ಗೆ ಸರ್ಕಾರ ಸ್ಪಂದನ ಮಾಡುತ್ತಿಲ್ಲ. ಆದ್ದರಿಂದ ಇದು ರೈರ ವಿರೋಧಿ ಸರ್ಕಾರ ಎಂದು ಹೇಳಬೇಕಾಗುತ್ತದೆ. ಆಮೇಲೆ ನಾವೇನು ಕೇಳಿದ್ದೆವು. ಇವತ್ತು ಬರಗಾಲದ ಕಾಮಗಾರಿಗಳು ಸರಿಯಾಗಿ ಆಗುತ್ತಿಲ್ಲ. ಲೋಕಾಯುಕ್ತದವರು ಒಂದು ವರದಿಯನ್ನು ಕೊಟ್ಟಿದ್ದಾರೆ, ಎಸ್.ಪಿ.ಯವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಅದನ್ನು ಮಂಡನೆ ಮಾಡಿ ಎಂದು ನಾವು ಹೇಳಿದೆವು. ಹಾಗೆ ಮಾಡುವುದಕ್ಕೆ ಕಾನೂನಿನ ಪ್ರಕಾರ, ರೂಲ್ಸ್ ಪ್ರಕಾರ ಬರುವುದಿಲ್ಲ. ಎಂದು ಹೇಳಿದರು ಕೊನೆಯಪಕ್ಷ ಮಾನ್ಯ ಅಧ್ಯಕ್ಷರೇ, ತಮ್ಮ ಚೇಂಬರ್‌ನಲ್ಲಿಯಾದರೂ ಪ್ರತಿಪಕ್ಷದ ನಾಯಕರನ್ನು ಕರೆಸಬಹುದಾಗಿತ್ತು. ಈಗ ಮಾನ್ಯ ಖಿರ್ಗೆಯವರು ಮೂವತ್ತು ಘಟನೆಗಳ ಬಗ್ಗೆ ಹೇಳಿ, ಮುವತ್ತು ಕೇಸುಗಳು ಆಗಿವೆ, ಇಲ್ಲಿ ಸರಿಯಾದಂಥ ಕಾಮಗಾರಿಗಳು ನಡೆಯುತ್ತಿಲ್ಲ. ಇಷ್ಟೊಂದು ಕೋಟ್ಯಾಂತರ ರೂಪಾಯಿಗಳ ಕೆಲಸವನ್ನು ನಾವು ಮಾಡುವಾಗ ಇವತ್ತು ಇಲ್ಲಿ ಕೇವಲ ಮೂವತ್ತು ಕೇಸುಗಳ ಬಗ್ಗೆ ಏಕೆ ಇಷ್ಟು ದೊಡ್ಡದಾಗಿ ಪ್ರಸ್ತಾಪ ಮಾಡುತ್ತಿದ್ದೀರಿ ಎನ್ನುವಂಥ ಮಾತನ್ನು ಅವರು ಹೇಳಿದರು. ಆದ್ದರಿಂದ ನಾನು ಇವತ್ತು ಮಾನ್ಯ ಖಿರ್ಗೆಯವರನ್ನು ಕೇಳಬಯಸುತ್ತೇನೆ. ದಯವಿಟ್ಟು ಲೋಕಾಯುಕ್ತದವರು ಮತ್ತು ಎಸ್.ಪಿ.ಯವರು ಪ್ರತಿಯೊಂದು ಜಿಲ್ಲೆಯಿಂದ ಏನು ವರದಿಯನ್ನು ಕೊಟ್ಟಿದ್ದಾರೆ ಅದರ ಕಾಪಿ ಇವತ್ತು ಸರ್ಕಾರಕ್ಕೆ ಬಂದಿದೆ. ಅದು ಮುಖ್ಯಮಂತ್ರಿಗಳ ಕಡೆ ಇದೆ. ನಿಮಗೆ ಅದನ್ನು ಸದನದಲ್ಲಿ ಮಂಡನೆ ಮಾಡುವುದಕ್ಕೆ ಏನಾದರೂ ಕಾನೂನಿನ ಅಡ್ಡಿ ಇದ್ದರೆ ಮಾನ್ಯ ಅಧ್ಯಕ್ಷರೆ

ಚೇಂಬರ್‌ನಲ್ಲಿ ಕುಳಿತು ಅದನ್ನು ನೋಡೋಣ ಏನಾದರೂ ಅದರಲ್ಲಿ ಆಪಾದನೆ ಇಲ್ಲ. ಯಾವುದೇ ಒಂದು ಮಿಸ್‌ಅಪ್ರೋಪ್ರಿಯೇಶನ್ ಇಲ್ಲ ಎಂದು ಸರಿಯಾದ ವರದಿಯನ್ನು ಲೋಕಾಯುಕ್ತದವರು ಕೊಟ್ಟಿದ್ದಾರೆ ಎಂದರೆ ನಾವು ಒಪ್ಪಿಕೊಳ್ಳುತ್ತೇವೆ. ಕೇವಲ ಏಳೆಂಟು ಜಿಲ್ಲೆ ಅಲ್ಲ, ಪ್ರತಿಯೊಂದು ಜಿಲ್ಲೆಯಿಂದ ಎಸ್.ಪಿ.ಯವರ ರಿಪೋರ್ಟ್ ಲೋಕಾಯುಕ್ತಕ್ಕೆ ಬಂದಿದೆ. ಅದನ್ನು ನಾವು ವೆರಿಫೈ ಮಾಡಬಹುದಲ್ಲಾ? ಅದರಲ್ಲಿ ಏನೂ ಇಲ್ಲ ಅಂತಾದರೆ, ಆಯಿತು ಸರ್ಕಾರ ಹೇಳಿದ್ದನ್ನು ನಾವು ಕೇಳೋಣವಂತೆ ಆದರೆ ಅದಕ್ಕೂ ನೀವು ತಯಾರಿಲ್ಲ, ಮಾನ್ಯ ಅಧ್ಯಕ್ಷರ ಚೇಂಬರ್‌ನಲ್ಲಿಯಾದರೂ ಕುಳಿತು ಅದನ್ನು ನೋಡಬಹುದಲ್ಲ?

ಗೊಂದಲ

ಶ್ರೀ ಯು.ಆರ್. ಸಭಾಪತಿ :– ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಜಗದೀಶ್ ಶೆಟ್ಟರ್ :– ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನೆಂಬುದು ನನಗೆ ಅರ್ಥವಾಗುತ್ತಿಲ್ಲ.

ಗೊಂದಲ

ಶ್ರೀ ಯು.ಆರ್. ಸಭಾಪತಿ :– ಅಧ್ಯಕ್ಷರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು :– ತಡೆಯಿರಿ, ಅವರದ್ದು ಪಾಯಿಂಟ್ ಆಫ್ ಆರ್ಡರ್ ಇದೆಯಂತೆ.

ಶ್ರೀ ಯು.ಆರ್. ಸಭಾಪತಿ :– ಅಧ್ಯಕ್ಷರೇ, ಬರಗಾಲದ ವಿಷಯ ಚರ್ಚೆ ಮುಗಿದಿದೆ. ಚರ್ಚೆ ಮುಗಿದಮೇಲೆ ಮಾನ್ಯ ಶಿವಾನಂದ ಪಾಟೀಲರು ತಿದ್ದುಪಡಿಯನ್ನು ಏನು ತಂದಿದ್ದರು ತಾವು ಅದನ್ನು ತಳ್ಳಿಹಾಕಿದ್ದೀರಿ.

ಅಧ್ಯಕ್ಷರು :– ಅದು ಬೆಳಿಗ್ಗೆನೆ ಬಿದ್ದುಹೋಗಿದೆ.

ಶ್ರೀ ಯು.ಆರ್. ಸಭಾಪತಿ :– ಹಾಗಿದ್ದಮೇಲೆ ಮತ್ತೆ ಈಗ ಬರಗಾಲದ ಬಗ್ಗೆ ಎತ್ತಲಿಕ್ಕೆ ಎಲ್ಲಿ ಅವಕಾಶ ಇದೆ.

ಅಧ್ಯಕ್ಷರು :– ಅವರು ಹೇಳುತ್ತಿರುವುದು Main Motion ಬಗ್ಗೆ ಅವರು ತಿದ್ದುಪಡಿ ಬಗ್ಗೆ ಮಾತನಾಡುತ್ತಿಲ್ಲ. ನೀವು ಅದನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ತಿದ್ದುಪಡಿ ಬೆಳಿಗ್ಗೆಯೇ ಬಿದ್ದುಹೋಯಿತು.

ಶ್ರೀ ಯು.ಆರ್. ಸಭಾಪತಿ :– ಹಾಗಾದರೆ ಆವರು ಯಾವುದರ ಬಗ್ಗೆ ಮಾತನಾಡುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮೈನ್ ಮೋಷನ್ ಅನ್ನು ಓಟಿಗೇ ಹಾಕಿಲ್ಲ ಅಂದಮೇಲೆ ಅದು ಮುಗಿಯುವುದು ಹೇಗೆ?

ಗೊಂದಲ

ಅಧ್ಯಕ್ಷರು :– ಅವರು ತಿದ್ದುಪಡಿ ಬಗ್ಗೆ ಮಾತನಾಡುತ್ತಿಲ್ಲ Main Motion ನಲ್ಲಿ ಏನಿದೆ ಅದರ ಬಗ್ಗೆ ಮಾತನಾಡುತ್ತಿದ್ದಾರೆ ಆದ್ದರಿಂದ there is no point of order ಆದ್ದರಿಂದ ಶೆಟ್ಟರ್‌ರವರೇ, ನೀವು ಮಾತನಾಡಿ

ಶ್ರೀ ಯು.ಆರ್. ಸಭಾಪತಿ :– ಹಾಗಾದರೆ ಆ ತಿದ್ದುಪಡಿ ಮಧ್ಯದಲ್ಲಿ ಹೇಗೆ ಬಂತು?

ಅಧ್ಯಕ್ಷರು :– ಮಾನ್ಯ ಮಂತ್ರಿಗಳಾದ ಮಲ್ಲಿಕಾರ್ಜುನ ಖರ್ಗೆಯವರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಅವರು ಕ್ಲಾರಿಫಿಕೇಶನ್ಸ್ ಕೇಳುತ್ತಿದ್ದಾರೆ. ತಿದ್ದುಪಡಿ ಬಗ್ಗೆ

ಅವರು ಮಾತನಾಡುತ್ತಿಲ್ಲ. ಅವರು ತಿದ್ದುಪಡಿ ಬಗ್ಗೆ ಮಾತನಾಡುವುದಕ್ಕೆ ನಾನು ಅಲೋ ಮಾಡುತ್ತಿಲ್ಲ. ನೀವು ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ನಾನು ಲೋಕಾಯುಕ್ತ ವರದಿಯ ಬಗ್ಗೆ ಹೇಳುತ್ತೇನೆ. ಕೊನೆಯ ಪಕ್ಷ ಆ ವರದಿ ಏನು ಬಂದಿದೆ, ಪತ್ರ ಏನು ಬಂದಿದೆ ಅದನ್ನಾದರೂ ತಮ್ಮ ಕಛೇರಿಯಲ್ಲಿ ಕುಳಿತು ವೆರಿಫೈ ಮಾಡಬಹುದು. ಅಂದರೆ ಸರ್ಕಾರ ಸಾಚಾ ಇದೆ, ಕೆಲಸ ಸರಿಯಾಗಿದೆ ಎನ್ನುವಂಥದ್ದು ಲೋಕಾಯುಕ್ತ ವರದಿಯಿದ್ದರೆ ಅದನ್ನೂ ನಾವು ಕನ್‌ಸಿಡರ್ ಮಾಡಬಹುದು, ಆಗ ನಾವು ನಮ್ಮ ಆಪಾದನೆಯನ್ನೂ ಹಿಂದಕ್ಕೆ ತೆಗೆದುಕೊಳ್ಳಲು ತಯಾರಾಗಿದ್ದೇವೆ. ಅದರೆ ನಾವು ಇವತ್ತು ಆಪಾದನೆ ಮಾಡುವಂಥದ್ದು, ಕೆಲವೊಂದು ಘಟನೆಗಳನ್ನು ನೋಡಿಕೊಂಡು, ಪತ್ರಿಕಾ ಹೆಳಿಕೆಯನ್ನು ನೋಡಿಕೊಂಡು ನಾವೇ ಸ್ವತಃ ಓದಿದಂಥ ಸಂದರ್ಭದಲ್ಲಿದ್ದನ್ನು ನೋಡಿಕೊಂಡು ನಾವು ಹೇಳಿದ್ದೇವೆ. ಅದಕ್ಕಾಗಿ ನಾವು ಹೇಳುವಂಥದ್ದು ಅಲ್ಲಿ ಬರಗಾಲ ಕಾಮಗಾರಿ ಸರಿಯಾಗಿ ನಡೆದಿದೆಯೋ ಇಲ್ಲವೋ ಕಳಪೆ ಕಾಮಗಾರಿ ನಡೆದಿದೆಯೋ ಇಲ್ಲವೋ, ಅವ್ಯವಹಾರ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ಸದನದ ಸಮಿತಿ ಮಾಡಿ ಎಂದರೆ ಸರ್ಕಾರಕ್ಕೇಕೆ ಇಷ್ಟೊಂದು ಪ್ರಿಸ್ಟೇಜು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇಲ್ಲಿ ಪ್ರತಿಷ್ಠೆಯ ವಿಷಯವಾಗಿ ಮಾಡಿಕೊಳ್ಳುವ ಅವಶ್ಯಕತೆಯೇ ಇಲ್ಲ, ಆದ್ದರಿಂದ ಮಾನ್ಯ ಖರ್ಗೆಯವರಿಗೆ ಮತ್ತು ಮುಖ್ಯಮಂತ್ರಿಯವರಿಗೆ ಒತ್ತಾಯ ಮಾಡುತ್ತಿದ್ದೇನೆ. ದಯವಿಟ್ಟು ಇದನ್ನು ಪ್ರತಿಷ್ಠೆಯ ವಿಷಯವಾಗಿ ಮಾಡಿಕೊಳ್ಳದೆ, ಇವತ್ತು ಅಲ್ಲಿ ನಿಜವಾದ ವಸ್ತು ಸ್ಥಿತಿ ಏನಿದೆ, ತಾವು ಇಷ್ಟೊಂದು ಕೆಲಸಗಳು ಆಗಿದೆಯೆಂದು ಹೇಳಿದಿರಿ, 12 ಕೋಟಿ 65 ಲಕ್ಷದಷ್ಟು ಮಾನವ ದಿನಗಳ ಉಪಯೋಗವಾಗಿದೆ ಎನ್ನುವಂಥನ್ನು ಹೇಳಿದ್ದೀರಿ, ನಾವು ಜೆ.ಸಿ.ಬಿ. ಯಂತ್ರಗಳಿಂದ ಮಾಡಿದ್ದು ಎಂದು ಹೇಳಿದ್ದೇವೆ, ಕಳಪೆ ಕಾಮಗಾರಿ ಆಗಿದ್ದನ್ನು ಹೇಳಿದ್ದೇವೆ, ಇಷ್ಟೆಲ್ಲಾ ಇದ್ದಾಗ ಇವತ್ತು ನೀವೇನು ಅಂಕಿಅಂಶಗಳನ್ನು ಕೊಟ್ಟಿದ್ದೀರಿ ಇದು ಸರಿಯಾದ ಅಂಕಿಅಂಶಗವಲ್ಲವೆಂದು ಚಾಲೆಂಜ್ ಮಾಡಿ ಹೇಳುತ್ತಿದ್ದೇನೆ. ಅಲ್ಲಿ ಫೀಲ್ಡ್‌ನಲ್ಲಿ ಸರಿಯಾದಂತದ್ದು ಇಲ್ಲ, ಅಧಿಕಾರಿಗಳು ಕೊಟ್ಟಿರುವಂತ ಅಂಕಿಅಂಶಗಳ ಆಧಾರದ ಮೇಲೆ ತಾವು ಸದನದಲ್ಲಿ ಉತ್ತರ ಕೊಡುತ್ತೀರಿ. ನಿಜವಾಗಿ ಫೀಲ್ಡ್‌ನಲ್ಲಿ ಆ ರೀತಿ ಕಾಮಗಾರಿ ಆಗಿಲ್ಲ, ತಾವೇನು ಇಷ್ಟೊಂದು ಕಾಮಗಾರಿಯಾಗಿದೆ, ಲಕ್ಷಾಂತರ ಕಾಮಗಾರಿಯಾಗಿದೆಯೆಂದು ಹೇಳಿದ್ದೀರಿ. ಆದರೆ ಯಾವ ರೀತಿಯಲ್ಲಿ ಕಾಮಗಾರಿ ಆಗಬೇಕಾತ್ತೋ ಅಷ್ಟು ಆಗಿಲ್ಲ ಎಂಬುದು ನಮ್ಮ ಆಪಾದನೆ, ಅದಕ್ಕಾಗಿ ಇವತ್ತು ನಮ್ಮ ಹತ್ತರ ಅಂಕಿಅಂಶಗಳು ಇದೆ. ಅಧಿಕಾರಿಗಳು ಕೊಟ್ಟ ಅಂಕಿಅಂಶಗಳ ಮೇಲೆ ತಾವು ಅವಲಂಬಿಸುವುದಾದರೆ ಆ ಗ್ರಾಮೀಣ ಪ್ರದೇಶದಲ್ಲೇನು ಕಾಮಗಾರಿ ನಡೆಯುತ್ತಿದೆ. ಅದನ್ನು ಹೋಗಿ ನೋಡುವ ಕೆಲಸವಾಗಬೇಕಲ್ಲಾ? ಆ ಕೆಲಸವಾಗಿಲ್ಲ, ಅದಕ್ಕಾಗಿ ಸದನದ ಸಮಿತಿಯೊಂದನ್ನು ಮಾಡಿ ಎಂದು ನಾವು ಒತ್ತಾಯ ಮಡುತ್ತಿದ್ದೇವೆ. ಅದರ ಜೊತೆಗೆ ಇನ್ನೊಂದು ಒತ್ತಾಯ ಮಾಡುವಂಥದ್ದು, ಬಡ್ಡಿ ಮನ್ನಾದ ಬಗ್ಗೆ, ಇವತ್ತು ಬಡ್ಡಿ ಮನ್ನಾದ ಬಗ್ಗೆ 127 ಕೋಟಿ ರೂ ಯೆಂದು ಅನೌನ್ಸ್ ಮಾಡಿದ್ದಿರಿ. ನಾವು ಸಂಪೂರ್ಣವಾಗಿ ಬಡ್ಡಿ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಆದರೆ ಸರ್ಕಾರ ಕೇವಲ ಆರು ತಿಂಗಳದನ್ನು ಮಾತ್ರ ಬಡ್ಡಿ ಮನ್ನಾ ಮಾಡಿ 127 ಕೋಟಿ ರೂ ಮಾತ್ರ ಘೋಷಣೆ ಮಾಡಿ ಅದರಲ್ಲಿ ಕೇವಲ 28–29 ಕೋಟಿ ರೂ ಬಿಡುಗಡೆ ಮಾಡಿದ್ದೀರಿ, ಉಳಿದ ಬಾಕಿ ಬಡ್ಡಿ ಮನ್ನಾವನ್ನು ಎಷ್ಟು ದಿವಸಗಳಲ್ಲಿ, ಮೂರು ಇಲ್ಲವೆ ಆರು ತಿಂಗಳು, ಎಷ್ಟು ದಿವಸಗಳಲ್ಲಿ ಬಿಡುಗಡೆ ಮಾಡುತ್ತೀರಿ ಎಂಬುದು

ಸ್ಪಷ್ಟವಾಗಬೇಕಾಗಿದೆ. ಇಲ್ಲಾ ನಾವು ಸಹಜವಾಗಿ ಬಿಡುಗಡೆ ಮಾಡುತ್ತೇವೆಂದರೆ ಆ ರೈತ ಸತ್ತುಹೋಗಿರುತ್ತಾನೆ, ಬೇರೆ ಹಾದಿ ಇಲ್ಲದೆ ಬ್ಯಾಂಕಿಗೆ, ಸೊಸೈಟಿಗೆ ಅಡ್ಡಾಡುತ್ತಿರುತ್ತಾನೆ, ಇದಕ್ಕೆ ಒಂದು ಟೈಮ್‌ಬೌಂಡ್ ಬೇಕಲ್ಲಾ, ಆ ಟೈಮ್‌ಬೌಂಡ್‌ನ್ನು ನಿಗದಿ ಮಾಡಿ. ಇನ್ನು ಬೆಳೆವಿಮೆ, ಮಾನ್ಯ ಕೌಜಲಗಿಯವರು ಇಲ್ಲೇ ಇದ್ದಾರೆ, 330 ಕೋಟಿ ರೂ ಬೆಳೆವಿಮೆಗಾಗಿ ಕೊಡಬೇಕಾಗಿತ್ತು. ಆ ಬೆಳೆವಿಮೆಗಾಗಿ ಹಣ ಬಿಡುಗಡೆಯಾಗಲಿಲ್ಲ, ಕೇವಲ 15–20 ಕೋಟಿ ರೂ ಯನ್ನು ಮಾತ್ರ ಬಿಡುಗಡೆ ಮಾಡಿದಿರಿ. ಉಳಿದದ್ದು ಏಕೆ ಬಿಡುಗಡೆಯಾಗಲಿಲ್ಲ? ಬೆಳೆ ವಿಮೆಯ ಹಣವೂ ತಕ್ಷಣವೇ ಬಿಡುಗಡೆಯಾಗಬೇಕೆಂದು ಒತ್ತಾಯ ಮಾಡುತ್ತೇವೆ. ಅದಕ್ಕೆ ಯಾವುದೇ ಸ್ಪಷ್ಟೀಕರಣ ಬರಲಿಲ್ಲ. ಇನ್ನೊಂದು ನಾನು ಹೇಳುವಂತದ್ದು ಸಾಲ ವಸೂಲಾತಿಯನ್ನು ದಯವಿಟ್ಟು ನಿಲ್ಲಿಸಿ. ಕೇಂದ್ರ ಸರ್ಕಾರ ಏನು ಮಾಡಿದೆ ಎಂದು ನಾವು ಆಗಲೇ ಹೇಳಿದಿರಿ. ಬಡ್ಡಿ ಮನ್ನಾ ಇಷ್ಟಾಗುತ್ತದೆಂದು ಲೆಕ್ಕ ಮಾಡಿಕೊಡಿ. ಅದರ ಬಗ್ಗೆ ಸರಿಯಾದಂಥ ಲೆಕ್ಕಾ ಮಾಡೋಣ. ಅದು ರಾಷ್ಟ್ರೀಕರಣಗೊಂಡ ಬ್ಯಾಂಕುಗಳಿಗೆ ಸಂಬಂಧಪಟ್ಟ ಪ್ರಶ್ನೆ, ಇಲ್ಲಿ ನೀವು ಸಾಲ ಬ ಡ್ಡಿ ಮನ್ನಾ ಮಾಡಿದ್ದು ಇಡೀ ಸೊಸೈಟಿಗೆ ಸಂಬಂಧಪಟ್ಟದ್ದು ಆದ್ದರಿಂದ ಅದರ ಬಗ್ಗೆ ಲೆಕ್ಕಾಚಾರ ಮಾಡೋಣ. ಅವರು ಸಾಲ ವಸೂಲಾತಿಯನ್ನು ಐದು ವರ್ಷ ನಿಲ್ಲಿಸಿದ್ದಾರೆ. ನೀವೂ ತಕ್ಷಣವೇ ಸಲ ವಸೂಲಾತಿಯನ್ನು ಏಕೆ ನಿಲ್ಲಿಸುತ್ತಿಲ್ಲ? ಎಲ್ಲಾ ಕಡೆ ದೊಡ್ಡ ಪ್ರಮಾಣದಲ್ಲಿ ಸಾಲ ವಸೂಲಾತಿ ನಡೆಯುತ್ತಿದೆ. ರೈತರ ಟ್ರಾಕ್ಟರ್‌ಗಳನ್ನು ಸೀಜ್ ಮಡುತಕ್ಕದ್ದು ಅವರ ಆಸ್ತಿಯನ್ನು ಜಪ್ತಿ ಮಾಡತಕ್ಕದ್ದೆಲ್ಲಾ ನಡೆಯತ್ತಿದೆ, ಆದ್ದರಿಂದ ಸಾಲ ವಸೂಲಾತಿಯನ್ನು ತಕ್ಷಣವೇ ನಿಲ್ಲಿಸುವಂತ ಆಜ್ಞೆಯನ್ನು ದಯವಿಟ್ಟು ಮಾಡಿ, ಅದರ ಬಗ್ಗೆ ಸಕಾರದಿಂದ ಸರಿಯಾದ ಸ್ಪಷ್ಟೀಕರಣ ಬರಲಿಲ್ಲ. ಇನ್ನೊಂದನ್ನು ಹೇಳುತ್ತಿದ್ದೇನೆ, ಇವತ್ತು ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನು ಧೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ ಎಂದು ಹೇಳುತ್ತಿದ್ದೇನೆ. ಅದರ ಬಗ್ಗೆ ಸಹ ಇವತ್ತಿನವರೆಗೆ ಘೋಷಣೆ ಮಡಲು ತಾವು ತಯಾರಿಲ್ಲ. ಇದರ ಅರ್ಥ ಏನಾಗುತ್ತದೆಂದರೆ, ತಾವು ಅಷ್ಟು ಬರಗಾಲ ಕಾಮಗಾರಿಯಾಗಿದೆ ಇಷ್ಟು ಹಣ ಉಪಯೋಗ ಮಾಡಿದ್ದೇವೆ, ಇಷ್ಟು ಅಕ್ಕಿಯನ್ನು ಉಪಯೋಗ ಮಾಡಿದ್ದೇವೆಂದೆಲ್ಲಾ ಹೇಳಿದ್ದೀರಿ, ಕೇಂದ್ರ ಸರ್ಕಾರ ಇನ್ನೂ ಇಷ್ಟು ಕೊಡಬೇಕೆಂದು ಹೇಳಿದ್ದೀರಿ, ಆದರೆ ಇವತ್ತು ಏನು ಆಗಬೇಕಾಗಿತ್ತೋ ಅದನ್ನು ಮಾಡಲಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ ಅದೇ ರೀತಿ ಮೇವಿನ ಕೊರತೆ, ಇವತ್ತು.

ಅಧ್ಯಕ್ಷರು :– ಇದರ ಬಗ್ಗೆಯೆಲ್ಲಾ ಮೊದಲೇ ಮಾತನಾಡಿದ್ದೀರಲ್ಲಾ? ಈ ವಿಷಯವೆಲ್ಲಾ ಕ್ರೋಢೀಕರಿಸಿ ಈಗಾಗಲೇ ಮಾತನಾಡಿದ್ದೀರಲ್ಲಾ?

ಶ್ರೀ ಜಗದೀಶ್‌ಶೆಟ್ಟರ್ :– ಇವತ್ತು ಮೇವು ಪಂಜಾಬ್, ಹರಿಯಾಣದಿಂದ ಬರುತ್ತಿದೆ ಎಂದು ಹೇಳಿದರು ಅದು ಇನ್ನೂ ಯಾವಾಗ ಬರುತ್ತದೆ ಎನ್ನುವಂಥದ್ದು? ಮತ್ತು ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರದ ಬಗ್ಗೆ ಅಧಿಸೂಚನೆಯನ್ನು ಇಲ್ಲಿಯವರೆಗೂ ಮಾಡಿಲ್ಲ, ಬಜೆಟ್ ಮಂಡನೆ ಮಾಡುವ ಸಮಯದಲ್ಲಿ ಹೇಳಿದ್ದೀರಿ, ಆದರೆ ಎಷ್ಟು ಕೇಸು ಎನ್‌ಕ್ವೆರಿ ಮಾಡಿದ್ದೀರಿ ಇಲ್ಲಿಯವರೆಗೆ? ಎಷ್ಟು ಇಲ್ಲಿಯವರೆಗೆ ರಿಪೋರ್ಟ್ ಆಗಿದೆ? ಅದರ ಬಗ್ಗೆ ಸರ್ಕಾರದ ಕಡೆಯಿಂದ ಯಾವುದೇ ಉತ್ತರ ಬರಲಿಲ್ಲ. ನಮ್ಮ ರೈತರು ವಿದ್ಯುತ್ ಬಿಲ್ಲನ್ನು ತುಂಬಲು ಆಗುತ್ತಿಲ್ಲ. ಅದಕ್ಕೂ ಮನ್ನಾ ಕೊಡಿ. ವಿದ್ಯುತ್ ಬಿಲ್ಲನ್ನು ತುಂಬಲು ವಿನಾಯಿತಿ ಕೊಡಿ ಎಂದು ಒತ್ತಯ ಮಾಡುತ್ತಿದ್ದೆನೆ. ಮತ್ತು ಕೊಪ್ಪಳದ ಹಿರೇಬಾಗನಾಳು ಗ್ರಾಮದಲ್ಲೇನು ಪೊಲೀಸ್ ದೌರ್ಜನ್ಯವಾಗಿದೆ ಅದು ನ್ಯಾಯಾಂಗ

ತನಿಖೆಯಾಗಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ರಾಜ್ಯ ಸರ್ಕಾರದ್ದು ಹೇಳಿದರು. ನಾವು ಇಷ್ಟೊಂದು 500 ಕೋಟಿ ರೂ ಯಷ್ಟು ಯಾವ್ಯಾವ ಯೋಜನೆಯ ಮೂಲಕ ಕೆಲವು ಇಲಾಖೆಗೂ ಖರ್ಚು ಮಾಡಿದ್ದಾರೆ. ಕೇಂದ್ರ ಸರ್ಕಾರದ ಹಲವಾರು ಯೋಜನೆಗಳು ಇದೆ, ಸಂಪೂರ್ಣ ಗ್ರಾಮೀಣ ಯೋಜನೆ, SGSY, SGRY ಮತ್ತು 10th Finance ಆ ಹಣವನ್ನೂ ಸಹ ಇವರು ಉಪಯೋಗ ಮಾಡಿದ್ದಾರೆ, ಹಾಗಾದರೆ ಅದಕ್ಕೆ ಬಂದಂಥ ಅಕ್ಕಿಯನ್ನು ಏನು ಉಪಯೋಗ ಮಾಡಿದ್ದಾರೆ? ಹೀಗಾಗಿ ರಾಜ್ಯ ಸರ್ಕಾರ ಏನು 400–500 ಕೋಟಿ ರೂ ಹಣವನ್ನೇನು ಖರ್ಚು ಮಾಡಿದ್ದೇವೆಂದು ಹೇಳುತ್ತಾರಲ್ಲಾ ಅದಕ್ಕೆ ಒಂದು ಶ್ವೇತಪತ್ರವನ್ನು ಹೊರಡಿಸಲಿ, ಯಾವ್ಯಾವ ಇಲಾಖೆಯ ಮೂಲಕ ಎಷ್ಟೆಷ್ಟು ಖರ್ಚು ಮಾಡಿದ್ದೇವೆ ಎಂಬ ಬಗ್ಗೆ ಇವರು ವೇಗ್ ಆಗಿ ಇಷ್ಟು ಖರ್ಚು ಮಾಡಿದ್ದೇವೆಂದರೆ, ಯಾವ ಇಲಾಖೆ, ಏನು, ಬರಗಾಲದ ಸಲುವಾಗಿಯೇ ಮಾಡಿದ್ದೀರಾ? ಬಜೆಟ್ ಪ್ರಾವಿಜನ್‌ನಲ್ಲಿ ಎಲ್ಲಿಂದ ಅಡ್ಜೆಸ್ಟ್ ಮಾಡಿದ್ದೀರಿ? ಇದೆಲ್ಲಾ ಸ್ಪಷ್ಟೀಕರಣ ಬೇಕಾಗುತ್ತದೆ, ಸುಮ್ಮನೆ ಹಾಗೆಯೇ ಹೇಳಿದರೆ ಅದು ವೇಗ್ ಆಗುತ್ತದೆ. ಅದಕ್ಕಾಗಿ ಇವತ್ತು ಮಾನ್ಯ ಖರ್ಗೆಯವರು ಹಲವಾರು ವಿಷಯದ ಬಗ್ಗೆ ಸದನಕ್ಕೆ ಸರಿಯಾದಂಥ ಮಾಹಿತಿಯನ್ನು ಕೊಡಲಿಲ್ಲ, ಅವರು ಅಂಕಿಅಂಶವನ್ನು ಕೊಟ್ಟಿದ್ದು ಬರಗಾಲ ಕಾಮಗಾರಿಯ ಬಗ್ಗೆ ಹೇಳಿದ್ದು ಕೇವಲ ಸರ್ಕಾರದ ಡಿಫೆನ್ಸ್‌ಗೆ ಬಂದಿದ್ದಾರೆಯೇ ಹೊರತು ನಿಜವಾದ ವಸ್ತು ಸ್ಥಿತಿಯನ್ನು ಅವರು ಇಡಲಿಲ್ಲ. ಹೀಗಾಗಿ ಸದನದ ಸಮಿತಿಯಾಗಬೇಕು, ಬಡ್ಡಿ ಮನ್ನಾ ಆಗಬೇಕು, ಸಾಲ ವಸೂಲಾತಿ ನಿಲ್ಲಬೇಕು. ಬೆಳೆ ವಿಮೆ ಹಣ ಬಿಡುಗಡೆಯಾಗಬೇಕು, ಎನ್ನುವಂಥ ಒತ್ತಾಯವನ್ನು ನವು ಮಾಡುತ್ತಿದ್ದೇವೆ. ಅನಂತರ ತೋಟಗಾರಿಕೆ ಇಲಾಖೆಯ ಬಗ್ಗೆ ನಮ್ಮ ಬಿಜಾಪುರ ಭಾಗದಲ್ಲಿ ದ್ರಾಕ್ಷಿ ಮತ್ತು ಇನ್ನಿತರೆ ತೋಟಗಾರಿಕೆ ಬೆಳೆಗಳು ನಾಶವಾಗಿದೆ, ಅದಕ್ಕೆ ಪರಿಹಾರ ಕೊಡುವಂಥದ್ದು ಆಗಬೇಕಾಗಿದೆ, ಅದಕ್ಕಾಗಿ ಮಾನ್ಯ ಅಧ್ಯಕ್ಷರಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವಂಥದ್ದು ಈ ಡಿಮ್ಯಾಂಡ್ಸ್‌ನ ಬಗ್ಗೆ ಸರ್ಕಾರ ಏನು ಹೇಳುತ್ತದೆ ಅದಕ್ಕೆ ಸ್ಪಷ್ಟವಾದಂಥ ಉತ್ತರವನ್ನು ಕೊಡಬೇಕು, ನಾನು ಇವತ್ತು ಒಂದನ್ನು ಬಯಸಿದ್ದೆ ಮಾನ್ಯ ಖರ್ಗೆಯವರ ಹುಟ್ಟುಹಬ್ಬ ಇವತ್ತು ಬಹಳ ಸಂತೋಷದಲ್ಲಿ ಅವರಿದ್ದಾರೆ, ಅದಕ್ಕಾಗಿ ಅವರಿಗೆ ಹುಟ್ಟುಹಬ್ಬದ ಶುಭಾಷಯಗಳನ್ನು ಸಲ್ಲಿಸುತ್ತಿದ್ದೇನೆ. ಇದೇ ಸಂತೋಷದಲ್ಲಿ ಅವರು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಇವತ್ತೇನು ನಾವು ಕೆಲವೊಂದು ರೈತರ ಪರವಾಗಿ ಡಿಮ್ಯಾಂಡ್‌ಗಳನ್ನು ಇಟ್ಟಿದ್ದೇವೆ ಅದಕ್ಕೆ ಏನಾದರೂ ಪರಿಹಾರವನ್ನು ಕೊಟ್ಟು ನಮ್ಮ ರೈತರಿಗೆ ಅವರ ಹುಟ್ಟುಹಬ್ಬದ ಕೊಡುಗೆಯನ್ನು ಕೊಡುತ್ತಾರೆಂದುಕೊಂಡಿದ್ದೆವು. ಆದರೆ ಅದು ಆಗಲಿಲ್ಲ, ಅದಕ್ಕಾಗಿ ಈಗಲಾದರೂ ಮನಸ್ಸು ಮಾಡಿ ಆ ಹುಟ್ಟುಹಬ್ಬದ ಕೊಡುಗೆಯಾಗಿ, ಅದೂ ಜುಲೈ 21 ನರಗುಂದದ ಬಂಡಾಯ, ಆವತ್ತೇನು ಅಲ್ಲಿ ರೈತರು ಹುತಾತ್ಮರಾಗಿದ್ದಾರೆ ಅವರ ಆತ್ಮಕ್ಕೂ ಶಾಂತಿ ಸಿಗುತ್ತದೆ, ದಯವಿಟ್ಟು ಕೆಲವೊಂದು ಪರಿಹಾರಗಳನ್ನು ಕೊಡುವ ಕೆಲಸವನ್ನು ಖರ್ಗೆಯವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಮಾಡಲಿ ಎಂದು ನಾನು ಮಾಡುತ್ತಿದ್ದೇನೆ.

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :– ಮಾನ್ಯ ಖರ್ಗೆಯವರ ಉತ್ತರವನ್ನು ನಾವು ಕೇಳಿದೆವು. ಸುಮಾರು ಎರಡು ಗಂಟೆಗಳ ಕಾಲ ಉತ್ತರ ಕೊಟ್ಟರೂ ತುಂಬಾ ನಿರಾಶೆಯಾಯಿತು. ವಾಸ್ತವಾಂಶಕ್ಕೂ ಅವರು ಕೊಟ್ಟಿರತಕ್ಕಂಥ ಉತ್ತರಕ್ಕೂ ಅಜಗಜಾಂತರ ವ್ಯತ್ಯಾಸ ಕಾಣಿಸುತ್ತದೆ. ಅವರು

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

880 ಕೋಟಿ ರೂ ಖರ್ಚು. ಮಾಡಿದ್ದೇವೆಂದು ಹೇಳಿದರು. 520 ಕೋಟಿ ರೂ ರಾಜ್ಯ ಸರ್ಕಾರದಿಂದ 358 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಎಂದು ಹೇಳಿದ್ದಾರೆ. ಸರ್ಕಾರವೇ ಉತ್ತರ ಕೊಟ್ಟಿರತಕ್ಕದ್ದು 80 ಕೋಟಿ ರೂಪಾಯಿಗಳನ್ನು ಎರಡು ವರ್ಷಗಳಿಂದ ಖರ್ಚು ಮಾಡಿಲ್ಲ, ಕೇಂದ್ರ ಸರ್ಕಾರದ CRF NCCF ಹಣದಲ್ಲಿ ರೂರಲ್ ಡೆವಲಪ್‌ಮೆಂಟ್ ಇಲಾಖೆಯಿಂದ, ನಾವು ಕುಡಿಯುವ ನೀರಿಗೆ 10 ಕೋಟಿ ರೂ ಇಟ್ಟಿದ್ದೇವೆಂದು ಹೇಳಿದರು. ಇವತ್ತು ಹಳ್ಳಿಗಾಡುಗಳಲ್ಲಿ ಕುಡಿಯಲು ನೀರಿಲ್ಲದೆ, ದನಕರುಗಳಿಗೆ ನೀರಿಲ್ಲದೆ ಬೋರ್‌ವೆಲ್‌ಗಳೆಲ್ಲಾ ಬತ್ತಿಹೋಗಿದೆ ಜಿಲ್ಲಾಧಿಕರಿಗಳನ್ನು ಕೇಳಿದರೆ ಬೋರ್‌ವೆಲ್‌ಗಳಲ್ಲಿ ನೀರಿಲ್ಲವೆಂದು ಹೇಳುತ್ತಾರೆ, ಯಾವುದಾದರೂ ಹಣದಲ್ಲಿ ರೀ–ಅಪ್ರೋಪ್ರಿಯೇಷನ್ ಮಾಡಿ ಬೋರ್‌ವೆಲ್ ತೆಗೆಯಬೇಕೆಂದು ಇವರು ಹೇಳುತ್ತಿದ್ದಾರೆ, ಅದರ ಬಗ್ಗೆ ಅವರು ಸರಿಯಾಗಿ ಹಣವನ್ನು ಒದಗಿಸಿಕೊಟ್ಟಿಲ್ಲ 12 ಕೋಟಿ ಜನರಿಗೆ ಕೆಲಸವನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ, 12 ಕೋಟಿಯಲ್ಲ ಒಂದು ಲಕ್ಷ ಜನರಿಗಾದರೂ ಕೆಲಸ ಮಾಡಲು ಸಿಕ್ಕಿಲ್ಲ, ಕೂಲಿ ಸಿಕ್ಕಿಲ್ಲವೆಂದು ನನಗನ್ನಿಸುತ್ತಿದೆ. ಒಂದು 50 ಭಾಗವಾದರೂ ಕೆಲಸ ಸಿಕ್ಕಿದ್ದರೆ ಸಮಾಧಾನ ಮಾಡಬಹುದಿತ್ತು ಇನ್ನು ಐವತ್ತು ಭಾಗ ಜೆಸಿಬಿಯಿಂದ ಮಾಡಿದ್ದಾರೆಂದು ಅಂದುಕೊಳ್ಳಬಹುದಿತ್ತು ನನಗನ್ನಿಸುತ್ತಿದೆ ಇದರಲ್ಲಿ ಸಂಪೂರ್ಣವಾಗಿ ದುರುಪಯೋಗವಾಗಿದೆ, ಆನಂತರ ತೋಟಗಾರಿಕಾ ಬೆಳೆಗಳಿಗೆ ಏನಾದರೂ ಪರಿಹಾರವನ್ನು ಕೊಡಬಹುದು, ಬಿಜಾಪುರದಲ್ಲಿ ಇವತ್ತು ತೋಟಗಾರಿಕಾ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಸುಮಾರು 25 ಪರ್‌ಸೆಂಟ್‌ನಷ್ಟೂ ಬೆಳೆ ಬರುತ್ತಿಲ್ಲ ಅದರ ಬಗ್ಗೆ ಸಹ ಏನೂ ಚಕಾರವನ್ನು ಎತ್ತಲಿಲ್ಲ. ಆನಂತರ ಲೋಕಾಯುಕ್ತದ ವರದಿ ಬಗ್ಗೆ ಅವರೇನು ಒಂಭತ್ತು ಪ್ರಕರಣಗಳಲ್ಲಿ ಕೇಸನ್ನು ದಾಖಲು ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಇಷ್ಟೊಂದು ಬೃಹತ್ ಕಾರ್ಯ ನಡೆಯುತ್ತಿರುವಾಗ, ಅದರಲ್ಲಿ ಒಂಭತ್ತು ಪ್ರಕರಣಗಳು ಸದನದ ಸರ್ಕಾರದ ಗಮನಕ್ಕೆ ಬಂದಾಗ, ನನಗನ್ನಿಸುತ್ತಿದೆ. ಇದು tip of the ice-betg ಇನ್ನೂ ಅನೇಕ ಪ್ರಕರಣಗಳನ್ನು ಮುಚ್ಚಿಡುವ ಪ್ರಯತ್ನಗಳು ಆಗಿದೆಯೆಂದು ನನ್ನ ಅನಿಸಿಕೆ. ಆದ್ದರಿಂದ ನೀವು ನಿಜವಾಗಿಯೂ ಪಾರದರ್ಶಕವಾದಂಥ ಸರ್ಕಾರವಾಗಿದ್ದರೆ, ಏನು ತಪ್ಪಾಗಿದೆ, ಲೋಕಾಯುಕ್ತದ ಎಸ್.ಪಿ. ಯವರು ಕಳುಹಿಸಿರತ್ಕ ವರದಿಯನ್ನು ನಮ್ಮ ಮುಂದೆ ಇಡಲು ಏನು ತೊಂದರೆ? ನಮ್ಮ ಪಕ್ಷದ ಕ್ಷೇತ್ರಗಳಲ್ಲಾಗಿದ್ದರೂ ಚಿಂತೆ ಇಲ್ಲ, ಎಲ್ಲಾಗಿದ್ದಾರೂ ಚಿಂತೆ ಇಲ್ಲ, ಅದರ ಬಗ್ಗೆ ಹೇಳಲಿಲ್ಲ, ನೀವೇನು ಮುಚ್ಚಿಡುತ್ತಿದ್ದೀರಿ ಎಂಬ ಅನುಮಾನ ಬರುತ್ತಿದೆ, ಇಲ್ಲದಿದ್ದರೆ ನಿಜವಾಗಿಯೂ ಅದನ್ನು ಇಲ್ಲಿಡಬೇಕಾಗಿತ್ತು. ಮೇವನ್ನು ಸಂಗ್ರಹಣೆ ಮಾಡುವ ಬಗ್ಗೆ ಅಷ್ಟು ತರಿಸಿದ್ದೇವೆ, ಇಷ್ಟು ತರಿಸಿದ್ದೇವೆಂದು ದೊಡ್ಡ ಬೊಬ್ಬೆಯನ್ನು ಹಾಕಿದ್ದಾರೆ, ಯಾವ ಒಂದು ಗೋಶಾಲೆಗಳೂ ಕೆಲಸ ಮಾಡುತ್ತಿಲ್ಲ ದನಗಳೆಲ್ಲಾ ವಾಪಸ್ ಹೋಗುತ್ತಿದೆ, ಶೇಕಡ 70 ರಷ್ಟು ಗೋವುಗಳು ಎಷ್ಟೋಕಡೆ ಹತ್ಯೆಯಾಗಿದೆ, ಕಸಾಯಿಖಾನೆಗೆ ಹೋಗಿವೆ, ಮಾರಾಟವಾಗಿದೆ, ಅರ್ಧ ಬೆಲೆಗೂ ಮಾರಾಟವಾಗಿಲ್ಲ, ಅಂಥ ಪರಿಸ್ಥಿತಿಯಲ್ಲಿ ಇವತ್ತು ಸರ್ಕಾರ ರೈತರ ಪರವಾಗಿರತಕ್ಕ ಸರ್ಕಾರವೆಂದು ಹೇಳಿಕೊಂಡು ಇವತ್ತು ರೈತರಿಗೆ ವಿಷಯವನ್ನು ಕೊಟ್ಟಿದೆ. ನಮ್ಮ ಸರ್ಕಾರವಿದ್ದಾಗ ಮೂರು ಸದನದ ಸಮಿತಯನ್ನು ರಚನೆ ಮಾಡಿದ್ದೆವು, ಶಿರಾದಲ್ಲಿ ಗೋಲಿಬಾರ್ ಆಗಿತ್ತು, ತಕ್ಷಣವೇ ಸದನದ ಸಮಿತಿಯನ್ನು ರಚನೆ ಮಾಡಿದ್ದೆವು, ಮತ್ತೆ ಖಿರ್ಗೆಯವರ ಅಧ್ಯಕ್ಷತೆಯಲ್ಲೇ ಒಂದು ಸದನದ ಸಮಿತಿ ಮಾಡಿದ್ದೆವು ಎಂದು ಕಾಣುತ್ತದೆ, ರೈತರ ಹತ್ಯೆಯಾದಾಗ ಅವರು ಒಂದು ವರದಿಯನ್ನು ಕೊಟ್ಟರು, ನಾವು ಅವರದನ್ನು ಒಪ್ಪಿಕೊಂಡು ಸುಮಾರು ಒಂದು

ಲಕ್ಷ ರೂ ಪರಿಹಾರವನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡೆವು. ಅದಾದಮೇಲೆ, ಕೆಪಿಟಿಸಿಎಲ್ ವಿಚಾರದಲ್ಲಿ ಒಂದು ಸದನದ ಸಮಿತಿಯನ್ನು ರಚನೆ ಮಾಡಿದ್ದೆವು, ಹೀಗೆ ನಾವು ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗಡೆ ವಿರೋಧ ಪಕ್ಷದವರು ಕೆಲವು ವಿಚಾರಗಳನ್ನು ಹೇಳುತ್ತಾರೆಂದಾಗ ಸರ್ಕಾರದವರು ಅದಕ್ಕೆ ಮಾನ್ಯತೆಯನ್ನು ಕೊಡಬೇಕಾಗುತ್ತದೆ. ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದರಲ್ಲಿ ಅವ್ಯವಹಾರವಾಗಿದೆ ಎಂದು ಇಷ್ಟೊಂದು ಒತ್ತಾಯವನ್ನು ಹೇಳಿದರೂ ಕೂಡ ಸರ್ಕಾರ ಅದರ ಬಗ್ಗೆ ಚಕಾರವನ್ನೆ ಎತ್ತಿಲ್ಲ. ಆಮೇಲೆ ಕೇವಲ 30 ಕೋಟಿ ರೂಪಾಯಿಗಳ ಸಹಾಯಧವನ್ನು ಏಮೆ ಬಗ್ಗೆ ಬಿಡುಗಡೆ ಮಾಡಿದ್ದಾರೆ. 60 ಕೊಟಿ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟು 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಆಂಧ್ರದವರು 222 ಕೋಟಿ ರೂ ತೆಗೆದುಕೊಂಡಿದ್ದರೂ ನಾವಿನ್ನೂ ಸಹ 30 ಕೋಟಿ ರೂಪಾಯಿಗಳನ್ನು ತಂದುಕೊಡುವುದಕ್ಕಾಗಲಿಲ್ಲ. ಅದರ ಬಗ್ಗೆ ಎಷ್ಟು ಬಿಡುಗಡೆ ಮಾಡುತ್ತಾರೆಂಬುದನ್ನು ಹೇಳಬೇಕಾಗುತ್ತದೆ. ಮತ್ತೆ ಸಾಲವನ್ನು ದೀರ್ಘಾವಧಿ ಸಾಲವಾಗಿ ಪರಿವರ್ತನೆ ಮಾಡಬೇಕೆಂದು ನಾವು ಒತ್ತಾಯ ಮಾಡಿದ್ದೆವು. ಅದರ ಬಗ್ಗೆಯೂ ಏನೂ ಹೇಳಲಿಲ್ಲ. ಆದ್ದರಿಂದ, ಈ ಎಲ್ಲಾ ವಿಚಾರಗಳಲ್ಲೂ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಮತ್ತು ನಾವು ಹೇಳಿದಂಥ ಬೇಡಿಕೆಗಳನ್ನು ಯಾವುದೂ ಒಪ್ಪಲಿಲ್ಲ. ಇವತ್ತು ನಾವು ಒತ್ತಾಯ ಮಾಡುತ್ತಿದ್ದೇವೆ, ಆಮೇಲೆ ಇದರ ಬಗ್ಗೆ ತಾರತಮ್ಯ ಎದ್ದು ಕಾಣಿಸುತ್ತಾ ಇದೆ. ಇವರು ಬಿಡುಗಡೆ ಮಾಡಿರುವ ಹಣಕ್ಕೂ, ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣಕ್ಕೂ ವ್ಯತ್ಯಾಸವಿದೆ ನನಗನಿಸುತ್ತದೆ, ರಾಜ್ಯಸರ್ಕಾರದಿಂದ ಸರಿಯಾಗಿ ಹಣ ಖರ್ಚು ಮಾಡದೇ, ಕೇಂದ್ರ ಸರ್ಕಾರದ್ದನ್ನೇ ಅವರು ಹೇಳುತ್ತಿದ್ದಾರೆ. ಆದ್ದರಿಂದ, ಸ್ವಲ್ಪ ಗೊಂದಲವೂ ಇದೆ, ಅನುಮಾನವೂ ಇದೆ. ಸ್ಪಷ್ಟವಾಗಿ ಮಾಹಿತಿ ಬೇಕೆಂದು ಹೇಳಿದರೆ, ನೀವು ಒಂದು ಶ್ವೇತಪತ್ರವನ್ನು ಹೊರಡಿಸುವುದರಲ್ಲಿ ಏನು ತಪ್ಪು. ನೀವು ಶ್ವೇತಪತ್ರವನ್ನು ಹೊರಡಿಸಲೇ ಬೇಕಾಗುತ್ತದೆ. ಸದನದ ಸಮಿತಿಯನ್ನು ರಚನೆ ಮಾಡಲೇಬೇಕು. ಕುಡಿಯುವ ನೀರಿಗೆ ತಕ್ಷಣ ಹಣವನ್ನು ಬಿಡುಗಡೆ ಮಾಡಬೆಕು, ಮೇವಿನ ವಿಚಾರದಲ್ಲೂ ಸಹ ಇವತ್ತು ಎಷ್ಟು ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ ಮತ್ತು ಏಮೆ ಬಗ್ಗೆಯೂ ಸಹ ಎಷ್ಟು ಹೇಳಿದ್ದಾರೆ, ಈ ಎಲ್ಲಾ ವಿಚಾರಗಳಿಗೆ ಸ್ಪಷ್ಟೀಕರಣ ಕೊಡಬೇಕು ಮತ್ತು ಸರ್ಕಾರ ಒಪ್ಪಿಕೊಳ್ಳಲೇಬೇಕೆಂದು ನಮ್ಮ ಪಕ್ಷದ ವತಿಯಿಂದ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

+ **ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ)** :– ಮಾನ್ಯ ಅಧ್ಯಕ್ಷರೇ, ಮೂರು ವರ್ಷಗಳ ಬರಗಾಲ ಪರಿಹಾರ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ರಾಜ್ಯದ ಜನತೆಗೆ ಎಷ್ಟರಮಟ್ಟಿಗೆ ಮಾಡಿದೆ ಎಂಬುದನ್ನು ಸನ್ಮಾನ್ಯ ಖರ್ಗೆಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾನು ಪ್ರತ್ಯಕ್ಷವಾಗಿ ನೋಡಿದಾಗ ಅನಿಸುತ್ತದೆ, ಇವರು ನೂರು ರೂಪಾಯಿ ಖರ್ಚು ಮಾಡಿದ್ದೇವೆಂದು ಹೇಳಿದರೆ, ಅದರಲ್ಲಿ ಕೇವಲ 20 ರೂಪಾಯಿ ಮಾತ್ರ ಜನರಿಗೆ ಸಿಕ್ಕಿದೆ. ಉಳಿದ 80 ರೂಪಾಯಿ ಯಾರಿಗೂ ಸಿಕ್ಕಿಲ್ಲ. ಉದಾಹರಣೆಗೆ ಇವತ್ತು ಕೆಲವು ಕಡೆ, ಕೆರೆ ಹೂಳೆತ್ತುವ ಕಾರ್ಯಕ್ರಮದಲ್ಲಿ ಕೆಲಸ ಆಗಿದೆ, ಇಲ್ಲ ಎಂದು ಹೇಳುವುದಿಲ್ಲ ಕೆಲವು ಕಡೆ ಯಾವ ಕೆಲಸವೂ ಆಗಿಲ್ಲ. ಇದರ ಬಗ್ಗೆ ಅವರು ನಾವು ಮಾಡಿದ್ದೇವೆ ಎಂದು ಹೇಳಲಿಲ್ಲ. ಅದೇ ರೀತಿ ಇವತ್ತು ರೈತರ ಸಲ ವಸೂಲಿ ಬಗ್ಗೆ ಯಾವುದೇ ಚಕಾರ ಎತ್ತಿಲ್ಲ. ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಸರ್ಕಾರ ಪರಿಹಾರ ಕೊಡುತ್ತದೆ ಎಂಬ ಮಾತನ್ನು ಅವರು ಹೇಳಲಿಲ್ಲ. ಅದೇ ರೀತಿ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಆಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ತೋಟಗಾರಿಕೆ ಬೆಳೆಗಳನ್ನು ಇವತ್ತು ರೈತರು ಏನು ಕಳೆದುಕೊಂಡಿದ್ದಾರೆ, ಇವರಿಗೆ ಪರಿಹಾರ ಕೊಡುತ್ತೇವೆಂದು ಎಲ್ಲಿಯೂ ಹೇಳಿಲ್ಲ. ಅದು ತೆಂಗಿನ ಮರ ಆಗಬಹುದು, ದ್ರಾಕ್ಷಿ ಆಗಬಹುದು ಮತ್ತೆ ಯಾವುದೇ ತೋಟಗಾರಿಕೆ ಬೆಳೆಗಳಿಗೆ ಇವತ್ತು ಪರಿಹಾರವನ್ನು ಅವರು ಘೋಷಣೆ ಮಾಡಲಿಲ್ಲ ಮತ್ತು ಅವರಿಗೆ ಆಶ್ವಾಸನೆಯನ್ನು ಕೊಡಲಿಲ್ಲ. ಇನ್ನು ಅನೇಕ ವಿಷಯಗಳ ಬಗ್ಗೆ ಲೋಕಾಯುಕ್ತರಿಂದ ತನಿಖೆ ಮಾಡಿಸಬೇಕು, ಅವರ ವರದಿಯನ್ನು ತಾವು ಹೇಳಬೇಕೆಂದು ಕೇಳಿದಾಗ, ಈ ಕೆಲಸ ಮಾಡಲಿಲ್ಲ. ಲೋಕಾಯುಕ್ತರಿಂದ ಅನೇಕ ಕೇಸುಗಳ ಬಗ್ಗೆ ಈ ಅನ್ಯಾಯದ ವಿಚಾರದಲ್ಲಿ ವರದಿಯಾಗಿದೆ. ಅದನ್ನು ಈ ಸದನದಲ್ಲಿ ಬಹಿರಂಗ ಮಾಡಿ ಎಂದು ನಾವು ಪದೇ ಪದೇ ವಿನಂತ ಮಾಡಿದರೂ ಕೂಡ, ಅವರು ಬಹಿರಂಗ ಮಾಡುವುದಕ್ಕೆ ಇಷ್ಟಪಡಲಿಲ್ಲ. ದಯಮಾಡಿ, ಅದನ್ನೂ ಸಹ ಅವರು ಬಹಿರಂಗಪಡಿಸಬೇಕು. ಜನತೆಗೆ ನಾವೇನು ಮಾಡಿದ್ದೇವೆಂದು ಗೊತ್ತಾಗಬೇಕು. ಉದಾಹರಣೆಗೆ, ಇವತ್ತು ಪಿ.ಎಲ್.ಡಿ. ಬ್ಯಾಂಕಿನಲ್ಲಿ ಸಾಲ ವಸೂಲಿ ಮಾಡುವುದಿಲ್ಲವೆಂದು ಹೇಳಿದ್ದರು. ಆದರೆ, ಇವತ್ತು ರೈತರ ಮನೆಯಲ್ಲಿರತಕ್ಕ ಗಂಗಳ ಜೆಂಬು, ಟಿ.ವಿ. ಟೇಪ್ ರೆಕಾರ್ಡರುಗಳನ್ನು ತೆಗೆದುಕೊಂಡು ಹೋಗಿ ಹರಾಜು ಮಾಡತಕ್ಕ ಮಟ್ಟಕ್ಕೆ ಬಂದಿದ್ದಾರೆ. ಇದರ ಬಗ್ಗೆಯೂ ಅವರು ಏನೂ ಮಾಡಲಿಲ್ಲ. ದಯಮಾಡಿ, ಇದನ್ನು ನಿಲ್ಲಿಸಬೇಕಾಗಿತ್ತು, ಆದರೆ ನಿಲ್ಲಿಸಿಲ್ಲ. ಜನತೆಗೆ ಆ ನಿಟ್ಟಿನಲ್ಲಿ ಅನುಕೂಲ ಮಾಡಿಲ್ಲ. ಸೊಸೈಟಿ ಸಾಲಗಳಿಗೆ, ಚೀಫ್ ಆಡಿಟರ್ ರೈತರ ಮನೆ ಬಾಗಿಲಿಗೆ ಹೋಗಿ ವಸೂಲಿ ಮಾಡುತ್ತಿದ್ದಾರೆ. ಅದೇ ರೀತಿ ವಿದ್ಯುಚ್ಛಕ್ತಿಯ ಹಳೆಯ ಬಿಲ್ಲುಗಳು 20 ಸಾವಿರ, 30 ಸಾವಿರ, 50 ಸಾವಿರ ಇದ್ದರೆ, ಅಂತಹ ರೈತರ ಮನೆಗಳಿಗೆ ಹೋಗಿ ಕರಂಟ್ ಕಟ್ ಮಾಡುವುದು, ಮತ್ತೆ ಸೀಜ್ ಮಾಡಿಸುವುದು, ಪೋಲೀಸ್ ಕೇಸ್ ಹಾಕುವುದು ಮಾಡಿದ್ದಾರೆ ಅನೇಕ ಕೇಸುಗಳಲ್ಲಿ ಹಾಕಿ ಹಳ್ಳಿಗಾಡಿನ ರೈತರಿಗೆ ಅನ್ಯಾಯವಾಗುತ್ತಿದೆ. ಅದರ ಬಗ್ಗೆಯೂ ಮಾನ್ಯ ಖರ್ಗೆಯವರು ಯಾವುದನ್ನೂ ಹೇಳಲಿಲ್ಲ. ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಎಲ್ಲಾ ಕಡೆ ಕುಡಿಯುವ ನೀರನ್ನು ಕೊಡುತ್ತಿದ್ದೇವೆಂದು ಹೇಳುತ್ತಾರೆ, ನೀವೂ ನೋಡಿದ ಹಾಗೆ ಇನ್ನೂ ಕೆಲವು ಹಳ್ಳಿಗಳಲ್ಲಿ ಟ್ಯಾಂಕುಗಳಿಂದ ನೀರು ಕೊಟ್ಟರೂ ಕೂಡ ಸಾಲುವುದಿಲ್ಲ. ಮೊನ್ನೆ ನೆಲಮಂಗಲ ತಾಲ್ಲೂಕು ತ್ಯಾಮಗೊಂಡಲು ಮಾರ್ಗವಾಗಿ ರಾತ್ರಿ 8 ಗಂಟೆಯಲ್ಲಿ ಬರುವಾಗ ಬಿಂದಿಗೆ ಹಿಡಿದುಕೊಂಡು ಹೆಣ್ಣುಮಕ್ಕಳು ನಿಂತುಕೊಂಡು ನೀವು ಆಚೆಗೆ ಹೋಗಬಾರದು ಎಂದು ಹೇಳತಕ್ಕಂಥ ಪ್ರಸಂಗ ಬಂದಿತ್ತು. ಆದ್ದರಿಂದ, ಸಂಪೂರ್ಣವಾಗಿ, ಪರಿಪೂರ್ಣವಾಗಿ ಈ ಬರಗಾಲ ಕಾಮಗಾರಿಗಳನ್ನು ಮಾಡಿಲ್ಲ. ಇವರು ಮಾಡಿರುವುದರಲ್ಲಿ ಬೇಕಾದಷ್ಟು ಅನ್ಯಾಯಗಳು ನಡೆದಿದೆ. ಎಲ್ಲಾ ಅಧಿಕಾರಿಗಳೂ ಅನ್ಯಾಯ ಮಾಡಿಲ್ಲ, ಕೆಲವು ಅಧಿಕಾರಿಗಳು, ಕೆಲವು ಜಿಲ್ಲೆ ಮತ್ತು ಕೆಲವು ತಾಲ್ಲೂಕುಗಳಲ್ಲಿ ಅನ್ಯಾಯ ಮಾಡಿದ್ದಾರೆ. ಈ ರೀತಿ ಆಗಿರತಕ್ಕ ಅನ್ಯಾಯಕ್ಕೆ ಸದನದ ಸಮಿತಿಯನ್ನು ರಚನೆ ಮಾಡಿ, ಕೂಲಂಕುಷವಾಗಿ ಪರಿಶೀಲನೆ ಮಾಡಿಸಬೇಕು, ಜಂಟಿ ಸದನದ ಸಮಿತಿಯನ್ನು ಮಾಡಬೇಕು. ಈ ಸಮಿತಿಯವರು ರಾಜ್ಯದ ಜನತೆಗೆ ಏನು ಅನ್ಯಾಯವಾಗಿದೆ ಎಂಬುದನ್ನು ಕೂಲಂಕುಷವಾಗಿ ತನಿಖೆ ಮಾಡಿ ತೋರಿಸಬೇಕು. ಈ ಮಾತುಗಳನ್ನು ಹೇಳಿ, ಸರ್ಕಾರ ಮಾಡಿರತಕ್ಕ ಬರ ಪರಿಹಾರ ಕಾಮಗಾರಿಗಳು ಸರಿಯಾಗಿ ಆಗಿಲ್ಲ, ಇದರಲ್ಲಿ ಅನ್ಯಾಯ ಮತ್ತು ಅಕ್ರಮಗಳಾಗಿವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

+ **ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ)** :– ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರ ಉತ್ತರದ ಬಗ್ಗೆ ಎರಡು ಮೂರು ವಿಚಾರಗಳ ಬಗ್ಗೆ ನಾನು ಅಸಮಾದಾನವನ್ನು ವ್ಯಕ್ತಮಾಡಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಈ ಸದನದ ಆಡಳಿತ ಮತ್ತು ವಿರೋಧ ಪಕ್ಷಗಳ ಎಲ್ಲಾ ಸದಸ್ಯರುಗಳು ಸದನದಲ್ಲಿ ಮಾತನಾಡಿ, ರಾಜ್ಯದಲ್ಲಿ ತೀವ್ರವಾಗಿರತಕ್ಕ ಬರಗಾಲದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಸಾಮಾನ್ಯವಾಗಿ ಇಂತಹ ಸಭೆಯಲ್ಲಿ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಇದು ನನಗೆ ನಿರಾಸೆಯಾಗಿರತಕ್ಕಂಥಾದ್ದು. ಇಂತಹ ವಿಚಾರದಲ್ಲಿ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು. ಏಕೆಂದರೆ, ನಾವು ಬರೀ ಗೃಹ ಇಲಾಖೆ ಬಗ್ಗೆ, ಕಂದಾಯ ಇಲಾಖೆ ಬಗ್ಗೆ ಅಥವಾ ತೋಟಗಾರಿಕಾ ಇಲಾಖೆ ಬಗ್ಗೆ ಮಾತನಾಡಿಲ್ಲ. ಅವರು ಜವಾಬ್ದಾರಿಯಿಂದ, ಇದು ಕಲೆಕ್ಟೇವ್ ರೆಸ್ಪಾನ್ಸಿಬಿಲಿಟಿ ಮತ್ತು ಅದಕ್ಕಾಗಿ ಒಂದು ಕಮಿಟಿ ಮಾಡಿದ್ದೇನೆ, ಆ ಕಮಿಟಿಯ ಅಧ್ಯಕ್ಷರು ಅವರು, ಅವರೇ ಮಾನಿಟರ್ ಮಾಡತಕ್ಕಂಥವರು ಎಂದು ಹೇಳಿ ಖರ್ಗೆಯವರನ್ನು ಮುಂದುಮಾಡಿಸಿ ಅವರು ನುಣುಚಿಕೊಳ್ಳಬಹುದು. ಆದರೆ, ವಾಸ್ತವಾಂಶದಲ್ಲಿ ನನಗೆ ನಿರಾಸೆಯಾಗಿರತಕ್ಕಂಥಾದ್ದು, ಆ ಸಭಾನಾಯಕರ ಸ್ಥಾನಕ್ಕೆ ಮತ್ತು ಅವರ ಗೌರವವೂ ಹೆಚ್ಚಾಗುತ್ತಿತ್ತು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಎರಡನೆಯದಾಗಿ, ನಾನು ಪ್ರಮುಖವಾಗಿ ಹೇಳಿದಂತ ವಿಚಾರವನ್ನು ಸ್ವಲ್ಪಮಟ್ಟಿನ ಅಂಕಿಅಂಶಗಳನ್ನು ಮಾನ್ಯ ಖರ್ಗೆಯವರು ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಹೇಳಿದ್ದಾರೆ. 2001–02 ರಲ್ಲಿ, 2002 ಸೆಪ್ಟೆಂಬರ್‌ನಲ್ಲಿ ಮತ್ತೆ 2003 ರಲ್ಲಿ ಒಟ್ಟು ಸುಮಾರು 2,980 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ನಮಗೆ ಪರಿಹಾರದ ರೂಪದಲ್ಲಿ ಕೊಡಬೇಕು ಮತ್ತೆ 13 ಲಕ್ಷ ಟನ್ ಆಹಾರಧಾನ್ಯಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಇಷ್ಟರಮಟ್ಟಿಗೆ ಈ ಅಂಕಿಅಂಶಗಳು ನಮಗೆ ಗೊತ್ತಿರಲಿಲ್ಲ. ಸರ್ಕಾರ ಒಟ್ಟು ಮೂರು ಮನವಿಗಳನ್ನು ಸಲ್ಲಿಸಿ ಮೂರು ಸಾವಿರ ಕೋಟಿ ರೂಪಾಯಿಗಳ ಪರಿಹಾರಧನವನ್ನು ಕೊಡಬೇಕೆಂದು ಕೇಳಿದ್ದೇವೆಂಬ ಮಾತು ಈಗ ಹೊರಗಡೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು, he should make it a National debate. ಇವತ್ತು ಕೇಂದ್ರ ಸರ್ಕಾರ ಒರಿಸ್ಸಾಗೆ ಯಾವ ರೀತಿ ಕೊಟ್ಟಿದೆ, ಉತ್ತರ ಪ್ರದೇಶಕ್ಕೆ ಯಾವ ರೀತಿ ಕೊಟ್ಟಿದೆ? ನಮ್ಮ ಮುದ್ದಹನುಮೇಗೌಡರು ಇವತ್ತು ಬೆಳಿಗ್ಗೆ ಬಹಳ ಪ್ರಮುಖವಾದ ವಿಚಾರವನ್ನು ಎತ್ತಿದ್ದಾರೆ. ರಾಜ್ಯದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆ ಇದೆ, 1,400 ಕೋಟಿ ರೂಪಾಯಿಗಳು ಬಾಕಿ ಇರತಕ್ಕ ಸಂದರ್ಭದಲ್ಲಿ ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳತಕ್ಕ ಸನ್ನಿವೇಶದಲ್ಲಿ, ಅವರ ಸಹಾಯಕ್ಕೆ ಕೇಂದ್ರ ಸರ್ಕಾರ ಬಂದಿಲ್ಲ. ಅವರು ಮೂರು ರಾಜ್ಯಗಳಿಗೆ ಮಾತ್ರ, ರಾಜಕೀಯ ಉದ್ದೇಶಕ್ಕೋಸ್ಕರ ಎಂದು ಕೊಟ್ಟಿದ್ದಾರೆ. ಕರ್ನಾಟಕಕ್ಕೆ ಒಂದು ಪೈಸೆಯನ್ನು ಸಹಿತ ಬಿಡುಗಡೆ ಮಾಡಿಲ್ಲ. ನಾವು ಕೇಂದ್ರ ಸರ್ಕಾರಕ್ಕೆ ಮೂರು ಸಾವಿರ ಕೋಟಿ ರೂ ಕೇಳಿದ್ದೆವು, ಅದರಲ್ಲಿ ಅವರು 301 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ. ಹಾಗಾದರೆ, ನಾನು ಹೇಳುತ್ತೇನೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗನ್ನು ಕರೆಯುವುದಕ್ಕೆ ನೀವೇಕೆ ಪತ್ರ ಬರೆಯಲಿಲ್ಲ. ನೀವು ಪ್ರೊಟೆಸ್ಟ್ ಮಾಡದೇ, ಇಲ್ಲಿಯವರೆಗೆ ಏಕೆ ಸುಮ್ಮನಿದ್ದೀರಿ. ಅಂದರೆ ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ನೀವು ಮಾಡತಕ್ಕ ಯಾವ ಕೆಲಸಗಳನ್ನು ಮುಚ್ಚಿಕೊಳ್ಳುವುದಕ್ಕೋ ಅಥವಾ ಕೇಂದ್ರ ಸಕಾರದ ರಕ್ಷಣೆಯನ್ನು ಪಡೆಯಲಿಕ್ಕೋ ಪ್ರಯತ್ನ ಮಾಡುತ್ತಿದ್ದೀರಿ. ನೀವು ಅಲ್ಲಿ ವಿರೋಧ ಪಕ್ಷದವರು ರಾಷ್ಟ್ರಮಟ್ಟದಲ್ಲಿ ನೀವು ವಿರೋಧಪಕ್ಷದವರಾಗಿದ್ದು, ಮುಂದೆ ಸರ್ಕಾರವನ್ನು ನಡೆಸಬೇಕೆಂಬ ಪ್ರಯತ್ನ ಮಾಡತಕ್ಕಂಥವರು ನೀವೇನು ಮಾಡಬೆಕಾಗಿತ್ತು? you should have converted this into

(+ಈ ಚಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

a National debate. ಅದರ ಬದಲಾಗಿ, ಸುಮ್ಮನೆ ಇಲ್ಲಿ ಕುಳಿತುಕೊಂಡು ಅಷ್ಟು ಕೊಡಲಿಲ್ಲ, ಇಷ್ಟು ಕೊಡಲಿಲ್ಲವೆಂದು ಹೇಳಿದರೆ, ಇದು ನಾಯಕತ್ವದ ಲಕ್ಷಣ ಅಲ್ಲ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ. ಮುಖ್ಯವಾಗಿ ಎರಡು ಮೂರು ವಿಚಾರಗಳನ್ನು ಮಾನ್ಯ ಖರ್ಗೆಯವರಿಗೆ ಕೇಳುತ್ತೇನೆ. ತತ್‌ಕ್ಷಣದಲ್ಲಿ ಎಲ್ಲಾ ಬರ ಪರಿಹಾರದ ಕೆಲಸಗಳು ನಿಂತಿವೆ. ಇವತ್ತು ಯಾವ ಕೆಲಸವೂ ನಡೆಯುತ್ತಾ ಇಲ್ಲ. ಅಲ್ಪಸ್ವಲ್ಪ ಅಲ್ಲಲ್ಲಿ ಮಳೆಯಾಗಿದೆಯೆಂದು ನೂರು ದಿನದ ಕಾರ್ಯಕ್ರಮ ಏನು ತೆಗೆದುಕೊಂಡಿದ್ದೀರಿ, ಈ ಒಂದು ತಿಂಗಳಿಂದ ಒಂದು ದಿನದ ಕಾರ್ಯಕ್ರಮವೂ ಇಲ್ಲ.

4.00 ಪಿ.ಎಂ.

100 days; programe ನೀವು ಮೂರು ತಿಂಗಳಿಗೊಮ್ಮೆ ರಿವ್ಯೂ ಮಾಡಿ ಕಮಿಟಿ ಏನು ತೆಗೆದುಕೊಳ್ಳುತ್ತಾ ಇದ್ದೀರ that has come to a grinding halt; it has come to a halt. ಅದನ್ನು ಮತ್ತೆ ಪುನರಾರಂಭ ಮಾಡಬೇಕೆಂದು ನಾನು ಒತ್ತಾಯ ಮಾಡತಕ್ಕಂಥಾದ್ದು ಅದು ಕುಡಿಯುವ ನೀರಿನ ವಿಚಾರವಾಗಿರಲಿ, ಮೇವಿನ ವಿಚಾರವಾಗಿರಲಿ, ದನಕರುಗಳಿಗೆ ಬೇಕಾದಂಥ ಔಷಧ ಮತ್ತು ಆಸ್ಪತ್ರೆಗಳ ವಿಚಾರವಿರಲಿ, ವಿದ್ಯುಚ್ಛಕ್ತಿ ಸರಬರಾಜು ಇರಲಿ, ಇವೊತ್ತು ಬರಪರಿಹಾರದ ಕೆಲಸಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ಅದನ್ನು ನೀವು ಮತ್ತೆ ಪ್ರಾರಂಭ ಮಾಡಬೇಕೆಂದು ನನು ಒತ್ತಾಯ ಮಾಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಇಲ್ಲಿ ಡೀವಿಯೇಶನ್ ಆಗಿದೆ ಎಂಬ ಮಾತನ್ನು ಅವರು ಹೇಳಿದ್ದಾರೆ ನಾನು ಅದನ್ನು ಒಪ್ಪುತ್ತೇನೆ ಇವರು ರಾಜ್ಯ ಸರಕಾರದ ವತಿಯಿಂದ 522 ಕೋಟಿ ರೂಗಳನ್ನು ಏನು ಖರ್ಚು ಮಾಡಿದ್ದೇವೆಂದು ಹೇಳುತ್ತಾ ಇದ್ದಾರೆ, ಇದು ಬರಪರಿಹಾರಕ್ಕೋಸ್ಕರ ಖರ್ಚು ಮಾಡಿರತಕ್ಕಂಥ ಹಣವಲ್ಲ ಒಟ್ಟು 880 ಕೋಟಿ ರೂ.ಗಳನ್ನು ಮೂರು ವರ್ಷಗಳಲ್ಲಿ ಖರ್ಚು ಮಾಡಿದ್ದೇವೆ, ಎಂದು ಹೇಳುತ್ತಾರೆ. ಸ್ವಾಮಿ ನಾನು ಕೇಳುತ್ತೇನೆ. ಗೌರವಾನ್ವಿತ ಆಡಳಿತ ಪಕ್ಷದ ಸದಸ್ಯರು ಇದನ್ನು ವಿಚಾರ ಮಾಡಲಿ ಇವರು ಏನು ಅಂಕಿಅಂಶಗಳನ್ನು ಕೊಟ್ಟಿದ್ದಾರೆಂದರೆ, ಏಳು ಲಕ್ಷ ಟನ್‌ಗಳಷ್ಟು ಆಹಾರಧಾನ್ಯಗಳನ್ನು ಖರ್ಚು ಮಾಡಿರುವುದು ಒಂದು ಭಾಗ 880 ಕೋಟಿ ರೂ.ಗಳ ಕ್ಯಾಶ್‌ಕಾಂಪೊನೆಂಟ್ ಖರ್ಚು ಮಾಡಿದ್ದೇವೆಂದು ಇವರು ಹೇಳಿದ್ದಾರೆ. ಕೇಂದ್ರ ಸರಕಾರದ್ದು 358 ಕೋಟಿ ರೂ. ರಾಜ್ಯ ಸರಕಾರದ್ದು 522 ಕೋಟಿ ರೂ. ಹಾಗಾದರೆ ಆ 880 ಕೋಟಿ ರೂಗಳ ವಿವರಗಳನ್ನು ನೀವು ಕೊಡಿ. ಈ 880 ಕೋಟಿ ರೂಗಳನ್ನು 151 ತಾಲ್ಲೂಕುಗಳಿಗೆ ಡಿವೈಡ್ ಮಾಡಿದರೆ ಒಂದು ತಾಲ್ಲೂಕಿಗೆ ಕ್ಯಾಶ್‌ಕಾಂಪೊನೆಂಟ್ ಎಷ್ಟು ಬರಬೇಕು? ಆ ಪ್ರಕಾರ ಆರು ಕೋಟಿ ರೂಗಳು ಬರಬೇಕು ಯಾವ ಕ್ಷೇತ್ರದಲ್ಲಿ ನೀವು ಆರು ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ದಯವಿಟ್ಟು ನಮಗೆ ತಿಳಿಸಿ ಇದು ಕ್ಯಾಶ್ ಕಾಂಪೋನೆಂಟ್, ಫುಡ್‌ಕಾಂಪೊನೆಂಟ್ ಅಲ್ಲ. ಕ್ಯಾಶ್ ಕಾಂಪೋನೆಂಟ್ 880 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೀರಿ ಎಂದು ಹೇಳಿ ಈ ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ನೀವು ಪ್ರಯತ್ನವನ್ನು ಮಾಡುತ್ತ ಇದ್ದೀರಿ ಎಂಬ ವಿಚಾರವನ್ನು ನಾನು ಹೇಳುತ್ತಾ ಇದ್ದೇನೆ. ಆದುದರಿಂದ ನೀವು ಸದನಕ್ಕೆ ಕೊಡುತ್ತಾ ಇರತಕ್ಕಂಥ ಅಂಕಿಅಂಶಗಳು ಸತ್ಯಕ್ಕೆ ದೂರವಾಗಿರತಕ್ಕಂಥಾದ್ದು. ಎಲ್ಲಾ ಖರ್ಚುಗಳನ್ನು ನಿಮ್ಮ ಬಾಯಲ್ಲಿ ಬಂದ ಹಾಗೆ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳನ್ನು ಸ್ಥಗಿತ ಮಾಡಿ, ಡೀವಿಯೇಟ್ ಮಾಡಿಕೊಂಡು ಇವುಗಳು ಅಭಿವೃದ್ಧಿ ಕೆಲಸಗಳಲ್ಲ. ಬರಪರಿಹಾರದ ಕೆಲಸಗಳು ಎಂದು ಹೇಳಿ, ಜನಗಳಿಗೆ ತೋರಿಸತಕ್ಕಂಥ ವಂಚನೆಯ ಮಾರ್ಗವನ್ನು ಹಿಡಿದಿದ್ದೀರಿ. ಅದಕ್ಕೋಸ್ಕರವಾಗಿ ಒಂದು ಶ್ವೇತಪತ್ರವನ್ನು

ಹೊರಡಿಸಬೇಕು. ಇದನ್ನು ಒಂದು ರಾಷ್ಟ್ರೀಯ ಚರ್ಚೆಯಾಗಿ ಪರಿವರ್ತಿಸಬೆಕು, ಈ ಒಂದು 880 ಕೋಟಿ ರೂ.ಗಳ ಮೋಸದ ಅಂಕಿಅಂಶಗಳನ್ನು ಕೊಟ್ಟಿದ್ದೀರಿ ಅದನ್ನು ತಿದ್ದಿಕೊಳ್ಳಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇವೆ. ಹಾಗೂ ನಾವೆಲ್ಲರೂ ಕೇಳುತ್ತಾ ಇದ್ದೇವೆ, ಆಯಿತು, ನಾವು ಟಾಸ್ಕ್‌ಫೋಸ ಚೇರ್ಮನ್‌ಗಳಿದ್ದೀವೆ, ನಾವು ನಿಮಗೆ ಪತ್ರಗಳನ್ನು ಬರೆದಿಲ್ಲ, ಕೆಲವರು ಬರೆದಿದ್ದಾರೆ, ಕೆಲವರು ಬರೆಯದೇ ಇರಬಹುದು, ಇಲ್ಲಿ ಏನೇನು ಇರ್‌ರೆಗ್ಯುಲ್ಯಾರಿಟೀಸ್ ಆಗಿದೆ ಎಂಬ ಬಗ್ಗೆ. ಮಾನ್ಯ ಅಧ್ಯಕ್ಷರೆ, ಯಾವುದೇ ಸದನ ಸಮಿತಿಯನ್ನು ಮಾಡಿದರೂ ಕೂಡ ತಾವು ಮಾಡುವಂಥ ಸನ್ನಿವೇಶದಲ್ಲಿ ಸಭಾನಾಯಕರನ್ನು ಹಾಗೂ ಎಲ್ಲಾ ವಿರೋಧಪಕ್ಷದ ನಾಯಕರುಗಳನ್ನು ಕೇಳುತ್ತೀರಿ ಮತ್ತು ಆಡಳಿತ ಪಕ್ಷದ ಹೆಚ್ಚು ಜನ ಸದಸ್ಯರು ಸದನಸಮಿತಿಯಲ್ಲಿರುತ್ತಾರೆ. ಎರಡು ವರದಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ನಾವೊಂದು ಅವರೊಂದು ವರದಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ಒಂದು ಸದನ ಸಮಿತಿಯನ್ನು ಮಾಡದೇ ಇರುವುದರಿಂದ ಇವತ್ತು ವಿಧಾನ ಪರಿಷತ್ತು ಕಳೆದ ಎಂಟು ದಿನಗಳಿಂದ ನಡೆಯುತ್ತಾ ಇಲ್ಲ. ಇವೆಲ್ಲವೂ ನಿಮ್ಮ ಒಣಪ್ರತಿಷ್ಠೆ. ಈ ಒಣ ಪ್ರತಿಷ್ಠೆಯನ್ನು ಬಿಟ್ಟು, ನಮಗೆ ಬೇಕಾದಷ್ಟು ವಿಚಾರಗಳಿವೆ, ಬಿಸಿಯೂಟದ್ದು, ಸಿ.ಇ.ಟಿ. ವಿಚಾರ, ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗುತ್ತಿರುವುದು, ಸಿಇಟಿಯಲ್ಲಿ ದಲಿತರಿಗೆ ಅನ್ಯಾಯವಾಗುತ್ತಿರುವುದು, ಅವುಗಳೆಲ್ಲವನ್ನೂ ನಾವು ಚರ್ಚೆ ಮಾಡುವುದಿದೆ. ದಯಮಾಡಿ ತಾವುಗಳು ಇದನ್ನು ಒಣಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳದೆ, ಈ ಸತ್ಯಾಂಶಗಳನ್ನು ಪತ್ತೆ ಮಾಡಲು ಒಂದು ಸದನ ಸಮಿತಿಯನ್ನು ಮಾಡಬೆಕೆಂದು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು :– ಮಾನ್ಯ ಖರ್ಗೆಯವರು ಉತ್ತರವನ್ನು ಹೇಳಿ.ಮಾನ್ಯ ಬೈರೇಗೌಡರು ದಯಮಾಡಿ ಕುಳಿತುಕೊಳ್ಳಬೆಕು. ನನ್ನ ಮಾತನ್ನು ದಯವಿಟ್ಟು ಕೇಳಿ. ನಿಮ್ಮ ಕಡೆಯವರು 18 ಜನರು ಇದ್ದಾರೆ, ನಿಮಗೆ ನಾನು ಅವಕಾಶವನ್ನು ಕೊಟ್ಟರೆ ಎಲ್ಲರೂ ಕೇಳುತ್ತಾರೆ. ಅದಕ್ಕೆ ಏನು ಉತ್ತರ ಹೇಳುತ್ತೀರಿ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೆ, ದಯವಿಟ್ಟು ನನ್ನ ಮನವಿಯನ್ನು ಕೇಳಿ. ಈ ಚರ್ಚೆಯಲ್ಲಿ ನಾನು ಭಾಗವಹಿಸಿರಲಿಲ್ಲ, ಕೊನೆ ಪಕ್ಷ ಇದು ಏನು ಎಂದು ನನಗೆ ಅನುಮಾನ ಬಂದಿದೆ.

ಅಧ್ಯಕ್ಷರು :– ತಾವು ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಚರ್ಚೆಯಲ್ಲಿ ಬಾಗವಹಿಸಲು ಅವಕಾಶವಿತ್ತು. ನಿಮಗೆ ಅಡ್ಡಿ ಏನಿತ್ತು? ಯಾರಾದರೂ ನಿಮಗೆ ಅಡ್ಡಿ ಮಾಡಿದ್ದಾರೆಯೇ? ತಾವು ಎದ್ದು ನಿಂತ ಮೇಲೆ ಆ ಎಂಟು ಜನರೂ ಎದ್ದು ನಿಂತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ನಾನು ಇವ್ತೊತ್ತಿನ ಪರಿಸ್ಥಿತಿ ಏನಿದೆ ಎನ್ನತಕ್ಕಂಥಾದ್ದನ್ನು ಮತ್ತು ಮುಂದೆ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯ ಸರ್ಕಾರದಲ್ಲಿ ವೆದರ್‌ವಾಚ್ ಗ್ರೂಪ್ ಎನ್ನತಕ್ಕಂಥಾದ್ದು ಇದೆ. ಅದರಲ್ಲಿ ಎಲ್ಲಾ ಇಲಾಖಾ ಅಧಿಕಾರಿಗಳೂ ಇರುತ್ತಾರೆ. ಅವರು ಬೆಳೆ ಮತ್ತು ಮಳೆ ಪರಿಸ್ಥಿತಿಯನ್ನು ಅಧ್ಯಯನ ಮಾಡಿ.

ಅಧ್ಯಕ್ಷರು :– ತಾವುಗಳು ಆರನೇ ಸಲ ಚುನಾಯಿತರಾಗಿ ಬಂದ ಹಿರಿಯ ಸದಸ್ಯರು. ತಾವುಗಳು ಅರ್ಥಮಾಡಿಕೊಳ್ಳಬೇಕು. ತಾವುಗಳು ಚರ್ಚೆಯಲ್ಲಿ ಮಾತನಾಡಲು ಯಾರೂ

ಅಡ್ಡಿಪಡಿಸಿರಲಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ. ತಾವು ನಿಂತರೆ ಬೇರೆಯವರೂ ಅವಕಾಶ ಕೊಡಿ ಎಂದು ಕೈ ಎತ್ತುತ್ತಾರೆ, ದಯವಿಟ್ಟು ಕುಳಿತುಕೊಳ್ಳಿ, ನಿಮ್ಮ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ :– ಸದನ ಇರುವುದು ನಮ್ಮ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ನಾನು ಬೇರೆಯವರು ಪ್ರಸ್ತಾಪ ಮಾಡಿದ ವಿಚಾರಗಳನ್ನು ಪುನಃ ಪ್ರಸ್ತಾಪಿಸುವುದಿಲ. ಯಾರೂ ಮಾತನಾಡದೆ ಇರತಕ್ಕಂಥ ವಿಚಾರಗಳನ್ನು ರಾಜ್ಯದ ಗಮನಕ್ಕೆ, ಸದನದ ಗಮನಕ್ಕೆ ಹೇಳಬೇಕಾಗುತ್ತದೆ. ನಿಮ್ಮ ವರದಿ ಏನು ಹೇಳುತ್ತದೆ ಎಂಬುದನ್ನು ಸರಕಾರದ ಗಮನಕ್ಕೆ ತರಬೇಕಾಗುತ್ತದೆ.

ಅಧ್ಯಕ್ಷರು :– ನೀವು ನಿನ್ನೆ ಇಲ್ಲಿ ಮಾತನಾಡ ಬಹುದಾಗಿತ್ತಲ್ಲವೇ? ನಿಮಗೆ ಯಾರು ಅಡ್ಡಿ ಮಾಡಿದ್ದರು? ತಮಗೆ ಈಗ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ, ತಾವುಗಳು ಕುಳಿತುಕೊಳ್ಳಿ ಶ್ವೇತಪತ್ರ ಹೊರಡಿಸುತ್ತಾರಲ್ಲಾ, ಆಗ ತಾವು ಮಾತನಾಡಿ.

ಶ್ರೀ ಸಿ. ಬೈರೇಗೌಡ :– ನಾನು ಇಷ್ಟರಲ್ಲಿ ಮಾತನಾಡಿ ಮುಗಿಸುತ್ತಾ ಇದ್ದೆ. ಕೆಲವು ಅಂಕಿಅಂಶಗಳ ಸಮೇತ ನಾನು ಮಾತನಾಡ ಬಯಸುತ್ತೇನೆ.

ಅಧ್ಯಕ್ಷರು :– ತಾವುಗಳು ಅಷ್ಟು ಬೇಗ ಮುಗಿಸುವುದಿಲ್ಲ. ನನಗೆ ಗೊತ್ತಿಲ್ಲವೇ? ಇವರಂಥ ಹಿರಿಯ ಸದಸ್ಯರು ಹೀಗೆ ಮಾಡಿದರೆ ನಾನೇನು ಮಾಡಲಿ? ನಾನು ಅಸಹಾಯಕನಾಗಿದ್ದೇನೆ. ನಾನು ಅಸಹಾಯಕನಾಗಿದ್ದೇನಷ್ಟೇ.. ಭೈರೇಗೌಡರೇ, ತಾವೇ ನಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ? ಮೊದಲೇ ಕೋಲಾರದವರಿಗೆ ಹೆಚ್ಚು ಅವಕಾಶ ಕೊಡುತ್ತಾರೆಂದು ಇವರೆಲ್ಲಾ ದೂರು ಮಾಡುತ್ತಾರೆ. ತಾವು ನನ್ನ ಕಷ್ಟವನ್ನು ಅರ್ಥಮಾಡಿಕೊಳ್ಳಿ. ನಿಮ್ಮ ನಾಯಕರುಗಳು ಪ್ರತಿಯೊಂದು ವಿಚಾರಗಳನ್ನೂ ಹೇಳಿದ್ದಾರೆ. ಹೊಸ ವಿಚಾರಗಳೇನಿವೆ?

Sri C. Byregowda:- The report of 14th July 2003 indicate that he total area coverage is 1.85 lakh hectares as against the set target of ..... accounting for 24.21% coverage.....

ಅಧ್ಯಕ್ಷರು :– ದಯವಿಟ್ಟು ಕುಳಿತುಕೊಳ್ಳಿ You must understand.

ಗೊಂದಲ

ಮಾನ್ಯ ಸದಸ್ಯರು :– ನಮಗೂ ಮಾತನಾಡಲು ಅವಕಾಶ ಕೊಡಿ.

Sri C. Byregowda:- Sowing was less than normal.he progress was much less than normal level. It is less by 10 lakh hectares.

ಹತ್ತು ಲಕ್ಷಗಳಷ್ಟು ಹೆಕ್ಟೇರ್‌ಗಳ ಹೋದ ವರ್ಷಕ್ಕಿಂತ ಈ ವರ್ಷ ಕಡಿಮೆಯಾಗಿದೆ. ಆದ್ದರಿಂದ ಮುಂಚೆ ಬರತಕ್ಕಂಥ ವರ್ಷ ಇದಕ್ಕಿಂತ ಭೀಕರವಾಗುತ್ತದೆ. ಆದ್ದರಿಂದ ದಯವಿಟ್ಟು ಸರಕಾರದವರು ಈಗಲೇ ಅದಕ್ಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರತಕ್ಕಂಥ ಅವಶ್ಯಕತೆಯಿದೆ. ಗೋಶಾಲೆಗಳನ್ನು ನಿರ್ಮಿಸತಕ್ಕಂಥಾದ್ದು, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡತಕ್ಕಂಥದ್ದು ಮುಂತಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳ ಬೇಕಾಗುತ್ತದೆ. ನಮಗೆ ಇನ್ನೂ ಕಷ್ಟದ ಪರಿಸ್ಥಿತಿಯು ಬರುವ ಅಪಾಯವಿದ್ದು ಇದನ್ನು ನಾನು ಇಲ್ಲಿ ಹೇಳದೇ ಇದ್ದರೆ ಕರ್ತವ್ಯಚ್ಯುತಿ ಮಾಡಿದಂತಾಗುತ್ತದೆ. ಆದ್ದರಿಂದ ಸದನ ಸಮಿತಿಯನ್ನು ರಚನೆ ಮಾಡುವ ಅವಶ್ಯಕತೆಯಿದೆ. ಆದಕಾರಣ ಇದನ್ನು ಒಪ್ಪಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

+ **ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)** :– ಮಾನ್ಯ ಅಧ್ಯಕ್ಷರೆ, ಈಗಾಗಲೇ, ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಸೋಮಶೇಖರ್‌ರವರು, ಬೈರೇಗೌಡರು, ಸಿಂಧ್ಯಾಜಿಯವರು, ಚೆನ್ನಿಗಪ್ಪರವರು ಕೆಲವು ಕ್ಲಾರಿಫಿಕೇಶನ್‌ಗಳನ್ನು ಕೇಳಿದ್ದಾರೆ. ಜೊತೆಯಲ್ಲಿ ಸರಕಾರದವರು ಕೊಟ್ಟ ಅಂಕಿಸಂಕಿಗಳು ಸರಿಯಲ್ಲ, ಮತ್ತು ಈಗಾಗಲೇ ಏನು ಕೆಲಸ ನಡೆದಿದೆ, ಅದರಲ್ಲಿ ದುರುಪಯೋಗವಾಗಿದೆ ಎಂದು ಒಂದೆರಡು ಉದಾಹರಣೆಗಳನ್ನು ಹೇಳಿದರೂ ಕೂಡ, ಅದು ಸರಿಯಿಲ್ಲ, ಇದಕ್ಕೆ ಸದನದ ಸಮಿತಿಯನ್ನು ಮಾಡಬೇಕು, ಸಮಿತಿಯು ಅಲ್ಲಿ ಹೋಗಿ ಖುದ್ದಾಗಿ ನೋಡಿ, ಆ ಮೇಲೆ ಅದು ಸರಿಯೋ ತಪ್ಪೋ ಎಂಬುದನ್ನು ಹೇಳುತ್ತೇವೆ, ಎನ್ನತಕ್ಕಂಥ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಕೊಟ್ಟಂಥ ಅಂಕಿಸಂಕಿ ಏನಿದೆ, ಅಂದರೆ ಕೇಂದ್ರ ಸರಕಾರದಿಂದ ಎಷ್ಟು ಬಂತು, ಅದು ಸ್ಪಷ್ಟವಾಗಿ ಗವರ್ನಮೆಂಟ್ ಆರ್ಡರ್‌ನಲ್ಲಿ ಏನಿದೆ, ಆ ಆರ್ಡರ್ ಪ್ರಕಾರವೇ, ನಾನು ಹೇಳಿದ್ದೇನೆ. ಸುಮಾರು ಮೂರು ವರ್ಷಗಳಲ್ಲಿ ನಮಗೆ ಬಂದಂಥ ಹಣ, 358 ಕೋಟಿ ರೂ.ಗಳು ಎನ್ನುವಂಥಾದ್ದನ್ನು ಸ್ಪಷ್ಟಪಡಿಸಿದ್ದೇನೆ. ನಾವು ಒಟ್ಟು ಖರ್ಚು ಮಾಡಿದ ಹಣ ಎಷ್ಟು ಎಂಬ ಬಗ್ಗೆ ನಿಮಗೆ ಜಾಸ್ತಿ ಸಂಶಯವಿರುವುದು ವ್ಯಕ್ತವಾಗುತ್ತದೆ. ನಾವು ಯಾವ್ಯಾವ ಹಣವನ್ನು ಸಂದರ್ಭಾನುಸಾರವಾಗಿ ಬಿಡುಗಡೆ ಮಾಡಿದ್ದೇವೆ, ಉದಾಹರಣೆಗಾಗಿ, ಕೆಪಿಟಿಸಿಎಲ್‌ಗೆ, ಕುಡಿಯುವ ನೀರಿಗೋಸ್ಕರ ಸ್ಪೆಶಲ್ ಅಮೌಂಟ್ ಆಗಿ ನಾವು 27 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು. ಅದು ಆ ಬರಗಾಲದಲ್ಲಿ ಏಕೆಂದರೆ ಅದು ನಾರ್ಮಲ್ ಆರ್‌ಡಿಪಿಆರ್ ಪ್ರೋಗ್ರ್ಯಾಂ ಅಲ್ಲ. ವಿಶೇಷವಾಗಿ ಕಂಬಗಳನ್ನು ಹಾಕಲು ಕಂಡಕ್ಟ್‌ರ್‌ಗಳನ್ನು ಅಳವಡಿಸುವುದು ಮುಂತಾಗಿ, ಇದಕ್ಕೋಸ್ಕರ ಅವರು ಕೇಳಿದಂಥ ಹಣವನ್ನು ನಾವು ಸರಕಾರಿ ಖಜಾನೆಯಿಂದಲೇ ಬಿಡುಗಡೆ ಮಾಡಿದ್ದೇವೆ. ಮತ್ತು 2001–02 ರಲ್ಲಿ ಕೇಂದ್ರ ಸರಕಾರಕ್ಕೆ ನಾವು 906 ಕೋಟಿ ರೂ.ಗಳನ್ನು ಕೇಳಿದ್ದರೂ ಕೂಡ, ಅವರು ಒಂದು ನಯಾಪೈಸೆಯನ್ನೂ ಅವರು ನಮಗೆ ಬಿಡುಗಡೆ ಮಾಡಲಿಲ್ಲ. ನಮ್ಮ ಸರಕಾರದವರು ನ್ಯಾಚುರಲ್ ಕೆಲಾಮಿಟೀಸ್ ಫಂಡ್‌ನಲ್ಲಿ ಗವರ್ನಮೆಂಟ್ ಆಫ್ ಇಂಡಿಯಾದ 58 ಕೋಟಿ ರೂ ಮತ್ತು ನಮ್ಮ 60 ಕೊಟಿ ರೂ. ಅಂದರೆ 112 ಕೋಟಿ ರೂಗಳು, ಹೆಚ್ಚು ಕಡಿಮೆ ನಾವು ಅರ್ಧಕ್ಕಿಂತ ಹೆಚ್ಚು ಪ್ರಮಾಣದಲ್ಲಿ ನಾವೇ ಖರ್ಚು ಮಾಡಿದ್ದೇವೆ. ಅಂದರೆ ಅದರಲ್ಲಿ ತಾವು ಲೆಕ್ಕ ಹಾಕಿದರೆ ಸುಮಾರು, 58–60 ಕೋಟಿ ರೂ.ಗಳು ಅದೇ ರೀತಿಯಾಗಿ ಹೆಚ್‌ಕೆಡಿವಿ ಯಲ್ಲಿ ಇದೇ ಕಾಮಗಾರಿಯಲ್ಲಿ ಕಾಳಿಗಾಗಿ, ರೈತ ಕಾಯಕ ಕೆರೆ ಅಡಿಯಲ್ಲಿ ಇಂಟ್ರೆಸ್ಟನ್ನು ರೈತರಿಗೆ ಕೊಡತಕ್ಕಂಥಾದ್ದು ರೈತರಿಗೆ ಬರಗಾಲ ಎಂದು ನಾವು ಕೊಡುತ್ತಾಇದ್ದೇವೆ. ಬೆಳೆವಿಮೆಯನ್ನು ಕೂಡ ಬರಗಾಲ ಎಂದು ನಾವು ಕೊಡುತ್ತಾ ಇದ್ದೇವೆ. ಇವೆಲ್ಲಕ್ಕೂ ಕೂಡ ನಮ್ಮಲ್ಲಿನ ಹಣವೇ ಹೋಗುತ್ತಾ ಇದೆ. ಇದು ಕೇಂದ್ರ ಸರಕಾರದವರು ನಮಗೆ ಕೊಟ್ಟಂಥಾದ್ದು ಅಲ್ಲ. ಅಥವಾ ಇದನ್ನು ಕೆಲಸಕ್ಕಾಗಿಯೇ ಕೊಟ್ಟಿದ್ದೇವೆಂದು ನಾನೆಂದು ಹೇಳಲಿಲ್ಲ. ಪ್ರತಿಯೊಂದು ಮತಕ್ಷೇತ್ರದಲ್ಲಿ ಐದಾರು ಕೋಟಿ ರೂ.ಗಳು ಬರಬೇಕಾಗಿತ್ತು ಅದು ಏಕೆ ಬಂದಿಲ್ಲವೆಂಬುದನ್ನು ತಾವುಗಳು ಪ್ರಸ್ತಾಪ ಮಾಡಿದ್ದೀರಿ. ಅಲ್ಲಿ ಕ್ಯಾಸ್‌ಕಾಂಪೋನೆಂಟ್ ವಿವಿಧ ಇಲಾಖೆಗಳ ವತಿಯಿಂದ ಕೊಡತಕ್ಕಂಥಾದ್ದನ್ನು ಬಿಟ್ಟು ಸಿಆರ್‌ಎಫ್. ಎನ್‌ಸಿಸಿಎಫ್ ಫಂಡ್‌ನಲ್ಲಿ ಕೊಡತಕ್ಕಂಥಾದ್ದನ್ನು ಏನು ಮಾಡಿದ್ದೇವೆ,

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಅದರ ಜೊತೆಯಲ್ಲಿ ಈ crop insurance ಬಗ್ಗೆ ಮತ್ತು interest ಕೊಡತಕ್ಕಂಥದ್ದು KPTCL ಗೆ ಸಹಾಯ ಕೊಡತಕ್ಕಂಥದ್ದು HKDB ಮೂಲಕ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಕೆಲಸಗಳನ್ನು ತೆಗೆದುಕೊಂಡಿದ್ದು ಮಲೆನಾಡು ಅಭಿವೃದ್ಧಿಯಲ್ಲೂ 5 ಕೋಟಿ ರೂ ತೆಗೆದುಕೊಂಡಿದ್ದು ರೈತ ಕಾಯಕ ಕೆರೆಯಿಂದಲೂ 5 ಕೋಟಿ ರೂ ನಾವು ಬಿಡುಗಡೆ ಮಾಡಿದ್ದು ಹೀಗೆ ವಿವಿಧ ಬಾಬ್ತುಗಳಲ್ಲಿ ನಾವು ಹಣ ಏನು release ಮಾಡಿದ್ದೇವೆ ಅದೆಲ್ಲಾ ಕೂಡಿ ಲೆಕ್ಕಾ ಹಾಕಿ ಇವತ್ತು ನಿಮ್ಮ ಮುಂದಿಟ್ಟಿದ್ದೇನೆ Budgeted work ಅದು ಬೇರೆ interst ಕೊಡುವುದು ಅಥವಾ insurance ಕೊಡುವುದು KPTCL ಗೆ ಕೊಟ್ಟಿದ್ದು ಅಥವಾ HKDB ಇಂದ 10 ಕೋಟಿ ರೂ ತೆಗೆದು ಇದಕ್ಕೆ ಕೊಟ್ಟಿದ್ದು ಮತ್ತು ಶಾಸಕರ ನಿಧಿಯಿಂದ ಇದಕ್ಕಾಗಿ ನಾವು ತೆಗೆದುಕೊಂಡ ಹಣ – ಇವೆಲ್ಲಾ ಬಜೆಟ್‌ನಲ್ಲಿ ಇರಲಿಲ್ಲ. ಅದಕ್ಕೇ ಒಂದು ಸಮಸ್ಯೆಯನ್ನು ನಾವು ಬಗೆಹರಿಸಬೇಕಾದರೆ ನಮಗಿರುವ ಆರ್ಥಿಕ ಇತಿಮಿತಿಯಲ್ಲೇ ನಾವು ಯಾವುದಕ್ಕೆ ಆದ್ಯತೆ ಕೊಡಬೇಕೆಂದು ಮಾಡಬೇಕಾಗುತ್ತದೆ. ಯಾವುದೇ ಸರ್ಕಾರ ಇದ್ದರೂ ಕೂಡ ಇವತ್ತು ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ಮತ್ತು ರೈತ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕೋಸ್ಕರ ಇದೆಲ್ಲಾ ಹಣವನ್ನೂ ಕ್ರೋಢೀಕರಿಸಿ ನಾವು ಇವತ್ತು ಮಾಡಿದ್ದೇವೆ. ಮತ್ತು ಸ್ಪಷ್ಟವಾಗಿ ನಾವು ಹೇಳಿದ್ದೇವೆ ಏನೆಂದು? ಸಂದರ್ಭ ಬಂದರೆ ರೈತರಿಗೆ ಅನುಕೂಲ ಮಾಡುವುದಕ್ಕೋಸ್ಕರ ಜಾನುವಾರುಗಳಿಗೆ ಮೇವಿಗೋಸ್ಕರ ಕುಡಿಯುವ ನೀರಿಗೋಸ್ಕರ ಅಭಿವೃದ್ಧಿ ಕೆಲಸ ನಿಂತರು ಚಿಂತೆಯಿಲ್ಲ ನಾವು ಇದಕ್ಕೆ ಸಹಾಯ ಮಾಡುತ್ತೇವೆಂಬ ಮಾತು ಒಂದು ಸಲ ಅಲ್ಲ ಹತ್ತು ಸಲ ನಾವು ಪ್ರತಿಪಾದನೆ ಮಾಡಿದ್ದೇವೆ ಅದರ ಪ್ರಕಾರ ನಾವು ನಡೆದುಕೊಂಡಿದ್ದೇವೆ. ಆದರೆ ಹಣ ಎಲ್ಲಿದೆ? ಎಲ್ಲಿದೆ? ಎಲ್ಲ ನೀವು ಲೆಕ್ಕ ಮಾಡಿಕೊಂಡು ಹೋಗ್ರಿ ನಮ್ಮದು 460 ಕೋಟಿ ರೂ ಆಗುತ್ತದೋ ಇಲ್ಲವೋ ನೋಡಿ ಅದರ ಜೊತೆಯಲ್ಲಿ 300 ಕೋಟಿ ರೂ ಅವರದೇನು ಬಂದಿದೆ ಅದರಲ್ಲಿ ನಮ್ಮ ಪಾಲು ಬರಬೇಕಾದ್ದೂ ಬಂದಿದೆ. ಹೀಗೆ ಇವತ್ತು ಯಾವುದರಲ್ಲೂ ವ್ಯತ್ಯಾಸ ಮಾಡುವ ಅವಶ್ಯಕತೆ ಇಲ್ಲ. ನಮಗೆ Manipulate ಮಾಡಿ ಹೇಳುವ ಅವಶ್ಯಕತೆನೂ ಇಲ್ಲ. ಪ್ರಥಮ ಬಾರಿಗೆ systematic ಆಗಿ ಇವತ್ತು ರೈತರಿಗೆ ಅನುಕೂಲವಾಗಿರುವ ಕೆಲಸಗಳನ್ನು ನಾವು ಪ್ರತಿ ಮತಕ್ಷೇತ್ರದಲ್ಲೂ ಮಾಡಿಸಿದ್ದೇವೆ. I must complement all MLAs, ಅವರೂ ಕೂಡ interst ತೆಗೆದುಕೊಂಡು ನಮ್ಮ ಮತಕ್ಷೇತ್ರದಲ್ಲಿ ರೈತರಿಗೆ ಅನುಕೂಲವಾಗುವ ಕೆಲಸಗಳಿಗೆ ಆದ್ಯತೆ ಕೊಟ್ಟು ಕೆರೆ ದುರಸ್ತಿ ಇರಬಹುದು, water shed programme ಇರಬಹುದು, ಅಥವಾ ಕೆಲವು ಕಡೆ massive scale ನಲ್ಲಿ ಬಾಗಲಕೋಟೆ ಜಿಲ್ಲೆಯಂತಹ ಕಡೆ ರೋಣ ಅಂತಹ ಕಡೆ soil conservation works ನೂರಾರು ಜನರಿಗೆ engage ಮಾಡಿ ಮಾಡಿದ್ದಾರೆ ಇದೆಲ್ಲರಿಗೂ ಗೊತ್ತಿರುವಂತಹದು. 12 ಕೋಟಿ man-days ಹೇಗೆ generate ಆಯಿತು ತಮಗೆಲ್ಲಾ ಗೊತ್ತಿದೆ. ಇದೇನೂ ಹೊಸದೇ ನಾವೇನೂ ಪ್ರತಿಯೊಬ್ಬರನ್ನೂ ಎಣಿಸಿ ಎಣಿಸಿ ಮಾಡುವುದೇನಲ್ಲ ಎಲ್ಲೆಲ್ಲಿ ಕೆಲಸವಿದೆ ಅಲ್ಲಿ ನೂರು ಜನ ಕೆಲಸ ಮಾಡಲಿ 7 ದಿವಸ 8 ದಿವಸ ಮಾಡಲಿ ಅದರ ಲೆಕ್ಕದ ಆಧಾರದ ಮೇಲೆ how many man-days generated ಎಂದು ಹೇಳುತ್ತಾರೆ. ಹಿಂದೆ ತಾವೂ Revenue ಸಚಿವರಾಗಿದ್ದಿರಿ. ಆಗಲೂ ಎಷ್ಟು man-days generate ಆಯಿತು ಎಂದು ಕೇಂದ್ರ ಸರ್ಕಾರಕ್ಕೆ ಇದೇ ಲೆಕ್ಕ ಕೊಡುತ್ತಾ ಇದ್ದರು JCB ಕಥೆಯನ್ನೂ ಹೇಳುವೆನು ಕೇಳಿ. ಇವತ್ತೇನು ಅಂಕಿಸಂಖ್ಯೆ ನಾವು ಸಂಗ್ರಹ ಮಾಡಿದ್ದೇವೆ ಇದು ಅನೇಕ ಕಡೆ realistic, JCB ಯನ್ನು ನಾನು ಹೇಳಿದೆ. ಎಂತಹ ಕಡೆ ಉಪಯೋಗ ಮಾಡಿದ್ದಾರೆ. ಎಲ್ಲಿ cash portion ಹೆಚ್ಚಿಗಿದೆ. ಈಗ ರೈತ ಕಾಯಕ ಕೆರೆ – ಅಲ್ಲಿ ಹೆಚ್ಚಿನ ಹಣ ಇದೆ. ಆಮೇಲೆ HKDB ಯಲ್ಲಿ ಹೆಚ್ಚಿನ ರೀತಿಯಲ್ಲಿ ಹಣ ಕೊಟ್ಟಿದ್ದಾರೆ. ಹೀಗೆ ಎಲ್ಲೆಲ್ಲಿ discretion ಇದೇ even ಕೆಲವು MPs ಕೆರೆ ಕೆಲಸಕ್ಕೆ ಹಣ ಕೊಟ್ಟಿದ್ದಾರೆ. ಅವರ ಪಾಲನ್ನು JCB

ಆಗಬಹುದು ಅಥವಾ ಬೇರೆ machinery use ಮಾಡಲು ಮಾಡಿಕೊಂಡಿದ್ದರೆ ಉಳಿದ ಪಾಲನ್ನು ಜನರಿಗೆ ಕೊಡುವ ಕಾಳು ಹಣ ಏನು ಕೊಡಬೇಕು ಅದು ಯಾರೂ ಕೂಡ ತಪ್ಪಿಸಿಲ್ಲ. ಅದರಲ್ಲಿ ಯಾವ ವ್ಯತ್ಯಾಸ ಕೂಡ ಆಗಿಲ್ಲ. ಎಲ್ಲಿ hard soil ಇದೆ ಅಂತಹ ಕಡೆ JCB ಹಾಕಿ soil loose ಮಾಡಿ ಹೆಣ್ಣುಮಕ್ಕಳು ಗಂಡುಮಕ್ಕಳು ನೇರವಾಗಿ ಆ ಮಣ್ಣನ್ನು ಎತ್ತಬೇಕೆಂಬ ದೃಷ್ಟಿಯಿಂದ budgetary provision ಕೂಡ ಉಪಯೋಗ ಮಾಡಿರಿ ಎಂದು ನಾವು ಹೇಳಿದ್ದೇವೆ. ಕೆಲವು ಕಡೆ Deputy Commisioner ಗೆ ಹೇಳಿದ್ದೇವೆ, ಹೆಚ್ಚಿಗೆ ಹಣ CRF ಇಂದ ಕೊಡಬೇಕಾದರೂ ಅದಕ್ಕೆ ತೋರಿಸಿ ನೀವು ಕೊಡಿ ಎಂಬ ಆದೇಶವನ್ನು ನಮ್ಮ Development Commissioner ಕಡೆಯಿಂದ ಒಂದು GO ಕೂಡ ಕಳುಹಿಸಿಕೊಟ್ಟಿದ್ದೇವೆ. ನಾವು ಹೇಳುವ ತಾತ್ಪರ್ಯ ಎಂದೆ ಎಲ್ಲಾ ಕೆಲಸಗಳು ಕಾನೂನುಬದ್ಧವಾಗಿ ನ್ಯಾಯಬದ್ಧವಾಗಿ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿದ್ದೇವೆಯೇ ಹೊರತಾಗಿ ಇದರಲ್ಲಿ ಮೋಸ ವಂಚನೆ ದಗಾ ಪ್ರಶ್ನೆಗಳು ಉದ್ಭವಿಸುವುದಿಲ್ಲ ನಾನು ಈಗಾಗಲೇ ಹೇಳಿದ್ದೇನೆ, ಈ ಕೆಲಸಗಳ ಬಗ್ಗೆ ನಮ್ಮೆಲ್ಲಾ ಶಾಸಕರಿಗೂ ಗೊತ್ತು ಪ್ರತಿ ತಾಲ್ಲೂಕಿನಲ್ಲಿ ಇದರ supervision ಮತ್ತು ಈ ಕೆಲಸವನ್ನು ಮಾಡಿದವರು recommend ಮಾಡಿದವರು ಅವರೇ ನೋಡತಕ್ಕಂತಹ ಜವಾಬ್ದಾರೀನೂ ಕಾನೂನುಬದ್ಧವಾಗಿ ಇಲ್ಲದಿದ್ದರೂ ನೈತಿಕ ಹೊಣೆ ಅವರದಿದೆ. ಅದಕ್ಕಾಗಿ ಇವತ್ತು ನಾವು ಸದನ ಸಮಿತಿ ಮಾಡಿ ನಮ್ಮ MLA ಗಳ ಮೇಲೇ ಕೆಲಸ ಒಳ್ಳೆಯದಾಗಿದೆಯೋ ಕೆಟ್ಟದಾಗಿದೆಯೋ ಅಂತ ಮಾಡೋಣ ಅಥವಾ ನೀವು ಸರಿ ಮಾಡಿದ್ದೀರೋ ಇಲ್ಲವೋ ಅಂತ ಮಾಡೋಣ? ಲಕ್ಷಾಂತರ ಕೆಲಸದಲ್ಲಿ ಏನೂ ಆಗಿಲ್ಲಪ್ಪ ಅಂತ ನಾವು ಹೇಳಿದರೂ ಕೂಡ ಇವತ್ತು ಒಪ್ಪಲಿಕ್ಕೆ ತಯಾರಿಲ್ಲ ಇದೇನು ಅಂದರೆ ಬೆಟ್ಟ ಕೆದರಿ ಇಲಿ ತೆಗೆದಿದ್ದರಂತೆ, ಏನೂ ನಿಮಗೆ ಸಿಗುತ್ತಾ ಇಲ್ಲ. ಏನಾದರೂ ಹುಡುಕಬೇಕಲ್ಲಾ ಅದಕ್ಕಾಗಿ JCB ಹಚ್ಚಿದ್ದಾರೆ, ನಡೆಯಿರಿ ನೋಡೋಣ ಯಾವ ರೀತಿಯಾಗಿದೆ – ಈ ರೀತಿಯಾಗಿ ಹೇಳುತ್ತಾ ಹೋದರೆ ಅಧ್ಯಕ್ಷರೇ, ಖಂಡಿತವಾಗಿ ಇದು ಯಾರಿಗೂ ಗೌರವ ಬರುವಂಥದ್ದಲ್ಲ ಮತ್ತು ಜಂಟಿ ಸದನ ಸಮಿತಿ ಅವಶ್ಯಕತೆ ಇಲ್ಲ ಸ್ಪಷ್ಟವಾಗಿ ಹೇಳುತ್ತೇನೆ. ಯಾಕೆಂದರೆ ನಮ್ಮ ಶಾಸಕರು ನಮ್ಮ ಜಿಲ್ಲಾಧಿಕಾರಿಗಳು Chief secretaries ಗಳು ಈ ಬರಗಾಲ ಕಾಮಗಾರಿಗಳನ್ನು ಒಳ್ಳೆಯ ರೀತಿಯಿಂದ ನಿಭಾಯಿಸಿದ್ದಾರೆ. ನಾನು ಮೊದಲೇ ಹೇಳಿದ್ದೇನೆ ಎಲ್ಲಾದರೂ ಲೋಪದೋಷ ಇದ್ದರೆ ಅದು ಸರಿಪಡಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಅನೇಕ ಕಡೆ ಸ್ವಯಂ ನಾವೇ ನಮ್ಮ police officers investigate' ಮಾಡಿಸಿದ್ದೇವೆ. ನಾವೇ case register ಮಾಡಿದ್ದೇವೆ.

ಶ್ರೀ ಜಗದೀಶ ಶೆಟ್ಟರ್ :– ಲೋಕಾಯುಕ್ತರ ವರದಿ ತೋರಿಸಿ ಹಾಗಾದರೆ ಯಾಕೆ ಹೆದರುತ್ತೀರಿ?

ಗೊಂದಲ

ಅಧ್ಯಕ್ಷರು :– ತಾವೆಲ್ಲಾ ಮಾತನಾಡುವಾಗ ಅವರು ಸುಮ್ಮನಿದ್ದರು ಅವರು ಉತ್ತರ ಕೊಡುವಾಗ ಹಾಗೇ ಇರಿ ದಯವಿಟ್ಟು Please ಉತ್ತರ ಕೊಡಲಿ ಆಮೇಲೆ ಮಾತನಾಡಿ.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಇದು politically motivated ಯಾಕೆಂದರೆ ಇದು ಸ್ಟಂಟ್ ನಾನು ಹೇಳಬೇಕಾಗಿದೆ ಸರ್ಕಾರದ ವಿರುದ್ಧ ಇದೊಂದು ಸ್ಟಂಟ್ ಮಾಡುತ್ತಿದ್ದಾರೆ. Politically motivated ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ. flase allegations ಮಾಡುತ್ತಿದ್ದಾರೆ.

ಅದಕ್ಕಾಗಿ ಸರ್ಕಾರ ಇದಕ್ಕೆಂದೂ ಒಪ್ಪುವುದಿಲ್ಲ. ಇವರು ಮಾಡುವ ಎಲ್ಲಾ charges ಸತ್ಯಕ್ಕೆ ದೂರವಾದದ್ದು ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅಧ್ಯಕ್ಷರೇ, Horticulture ಬಗ್ಗೆ ಅವರು ಪ್ರಸ್ತಾಪಿಸಿದ್ದಾರೆ, ಅದರ ಬಗ್ಗೆ ನಾವೊಂದು memorandum ಕೊಡುತ್ತಿದ್ದೇವೆ. ಸುಮಾರು 3506 ಕೋಟಿ ರೂ ಲುಕ್ಸಾನಾಗಿದೆ ಎಂದು ಒಂದು estimate ಅವರು ತಯಾರು ಮಾಡಿದ್ದಾರೆ ನಾವು ಕೇಂದ್ರಕ್ಕೆ ಕೊಡುವ memorandum ನಲ್ಲಿ ಈ ತೋಟಗಾರಿಕೆಯಲ್ಲಿ ಆಗಿರುವ ಲುಕ್ಸಾನು ಅದು ತೆಂಗಿನ ಲುಕ್ಸಾನಿರಬಹುದು ಅಥವಾ ಬಿಜಾಪುರದಲ್ಲಾದ ಲುಕ್ಸಾನಿರಬಹುದು ಹಳೇ ಮೈಸೂರಿನಲ್ಲಾದ ತೋಟಗಾರಿಕೆ ಬೆಳೆ ಇರಬಹುದು ಇದರ ಬಗ್ಗೆ ನಾವು separate memorandum ತಯಾರು ಮಾಡಿ ಅವರಿಗೆ ವಿಶೇಷವಾದ ಅನುದಾನ ಕೊಡಿ ಅಂತ ಕೇಳುತ್ತೇವೆ. ಅದು ಬಂದ ಮೇಲೆ ಮುಂದೇನು ಮಾಡಬೇಕೋ ಅದು ಮಾಡುತ್ತೇವೆ. ಇಷ್ಟೊಂದು ಒಳ್ಳೆಯ ಕೆಲಸ ಮಾಡಿದರೂ ಕೂಡ ಅದಕ್ಕೆ ಸ್ಪಂದಿಸುತ್ತಾ ಇಲ್ಲ ಇದೇನು ತೋರಿಸುತ್ತದೆ. ಅಂದರೆ ಕೇವಲ ರಾಜಕೀಯ ಮಾಡಬೇಕೆಂಬ ದೃಷ್ಟಿಯಿಂದ ಹೊರತಾಗಿ ಮತ್ತೇನೂ ಇಲ್ಲ.

ಗೊಂದಲ

ಶ್ರೀ ಜಗದೀಶ ಶೆಟ್ಟರ್ :– ಅಧ್ಯಕ್ಷರೇ, ಬಡ್ಡಿ ಮನ್ನಾ ಮಾಡಲು ತಯಾರಿಲ್ಲ, ಬಡ್ಡಿ ಮನ್ನಾ ಬಗ್ಗೆ ಹೇಳಲಿಲ್ಲ, ಬೆಳೆ ವಿಮೆ ಹಣದ ಬಗ್ಗೆ ಏನೂ ಹೇಳಲಿಲ್ಲ ಆಮೇಲೆ ಸಾಲ ವಸೂಲಾತಿ ನಿಲ್ಲಿಸಲು ಹೇಳಲಿಲ್ಲ. ಇವ್ಯಾವುದಕ್ಕೂ ಇವರು ತಯಾರಿಲ್ಲ ಸದನ ಸಮಿತಿ ರಚನೆಗೆ ತಯಾರಿಲ್ಲ, ಲೋಕಾಯುಕ್ತರ ವರದಿ ಡಿಸ್‌ಕ್ಲೋಸ್ ಮಾಡಲು ತಯಾರಿಲ್ಲ ಕೋಟ್ಯಾಂತರ ರೂ ಭ್ರಷ್ಟಾಚಾರವಾಗಿದೆ ಅದನ್ನು ಮುಚ್ಚಿಡುವಂತಹ ಕೆಲಸ ಮಾಡುತ್ತಿದ್ದಾರೆ. ಇವತ್ತು ಇದು ರೈತ ವಿರೋಧಿ ಸರ್ಕಾರ, ರೈತರನ್ನು ಆತ್ಮಹತ್ಯೆಗೆಳೆದ ರೈತ ವಿರೋಧಿ ಸರ್ಕಾರ, ಇವತ್ತು ಸಾಲ ಮನ್ನಾ ಬಡ್ಡಿ ಮನ್ನಾ ಮಾಡಿರಿ ಎಂದರೂ ತಯಾರಿಲ್ಲ ಒಂದಕ್ಕಾದರೂ ಪರಿಹಾರ ಕೊಡಬೇಕಾಗಿತ್ತಲ್ಲಾ ಒಂದಕ್ಕೂ ಪರಿಹಾರ ಕೊಡಲಿಲ್ಲ ನಾವು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದೆವು, ಒಂದಕ್ಕೂ ಪರಿಹಾರ ಕೊಡಲಿಲ್ಲ, ಸರ್ಕಾರ ಸದನ ಸಮಿತಿ ಅಷ್ಟೇ ಅಲ್ಲ, ಬೆಳೆ ವಿಮೆ ಹಣದ ಬಗ್ಗೆ ಏನು ಹೇಳುತ್ತಾರೆ ಹೇಳಲಿಲ್ಲ. ಆಮೇಲೆ ಬಡ್ಡಿ ಮನ್ನಾ ಬಗ್ಗೆ 127 ಕೋಟಿ ರೂ. ಬಡ್ಡಿ ಮನ್ನಾ ಮಾಡಿದ್ದು ಯಾವಾಗ? ಯಾವಾಗ ಆ ಹಣ ಬಿಡುಗಡೆ ಮಾಡುತ್ತೀರಿ? ಮೂರು ತಿಂಗಳೋ? ಬೆಳೆ ವಿಮೆ ಇಲ್ಲ, ಅದರ ಹಣವೂ ಬಿಡುಗಡೆ ಇಲ್ಲ, ಹೀಗಾಗಿ ಇದು ರೈತ ವಿರೋಧಿ ಸರ್ಕಾರ,

(ಈ ಹಂತದಲ್ಲಿ ಬಿಜೆಪಿ ಮತ್ತು ಎಬಿಪಿಜೆಡಿ ಪಕ್ಷಗಳ ಮಾನ್ಯ ಸದಸ್ಯರು ಧರಣಿ ಆರಂಭಿಸುವರು)

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಇನ್‌ಷ್ಯೂರೆನ್ಸ್‌ದ್ದು ನಾವೇನು ಕೊಡಬೇಕೋ ಅದನ್ನು ಕೊಡುತ್ತೇವೆ. ಆದಷ್ಟು ಬೇಗನೆ ಕೊಡುತ್ತೇವೆಂದು ಹೇಳಿದ್ದೇವೆ. ಈಗಾಗಲೇ party ಕೊಟ್ಟಿದ್ದೇವೆ. 33 ಕೋಟಿ ರೂ ಬಡ್ಡೀದು ಕೊಟ್ಟಿದ್ದೇವೆ. ಉಳಿದ ಹಣ ಕೊಡಲು ನಾವು ತಯಾರಿದ್ದು ಹಂತಹಂತವಾಗಿ ಕೊಡುತ್ತೇವೆ.

ಗೊಂದಲ

ಅಧ್ಯಕ್ಷರು :– ಮಾನ್ಯ ಜ್ಞಾನೇಂದ್ರರವರೇ, ನಿಮ್ಮ ನಾಯಕರು ಮಾತನಾಡುವಾಗ ಅವರು ಸುಮ್ಮನೆ ಇದ್ದರು. ಈಗ್ಯಾಕೆ ತಾರತಮ್ಯ ಮಾಡುತ್ತೀರಿ?

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ರಾಯಪುರಕ್ಕೆ ಹೋಗಿದ್ದರು ಎಂದು ಕಾಣುತ್ತದೆ. ಏನೋ ಲೋಕ ಸಭೆಯ ಚುನಾವಣೆಯ ಸಿದ್ಧತೆ ನಡೆದಂತೆ ಕಾಣುತ್ತದೆ. ಈ ಆಕ್ಟಿವಿಟೀಸ್ ನೋಡಿದರೆ

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೇ, ಇವತ್ತು ನಾವು ರೈತರ ಪರವಾಗಿ ಹೋರಾಟ ಮಾಡುತ್ತಿದ್ದೇವೆ. ಚುನಾವಣೆಯ ಜ್ವರ ನಿಮಗೆ ಬಂದಿದೆ. ಇವತ್ತು ಲೋಕ ಸಭೆಯಲ್ಲಿ ಏನು ಮಾಡುತ್ತಿದ್ದೀರಿ? ನಾಳೆ ಏನು ಮಾಡುತ್ತಿದ್ದೀರಿ ಎಂದು ನಮಗೆಲ್ಲಾ ಗೊತ್ತಿದೆ. ಚುನಾವಣೆಯ ಜ್ವರ ಅವರಿಗೆ ಸ್ಟಾರ್ಟ್ ಆಗಿದೆ. ಕಾಂಗ್ರೆಸ್‌ಗೆ ಚುನಾವಣೆಯ ಜ್ವರ ಸ್ಟಾರ್ಟ್ ಆಗಿದೆ.

ಗೊಂದಲ

ಶ್ರೀ ಬಿ. ಸೋಮಶೇಖರ್ :– ಮಾನ್ಯ ಅಧ್ಯಕ್ಷರೇ, ಸರ್ಕಾರ ಇಷ್ಟೊಂದು ಪ್ರತಿಷ್ಠಿತವಾಗಿ ನಿಲ್ಲಬಾರದು ಏಕೆಂದರೆ ಇವತ್ತು ಬಹಳ ಗಂಭೀರವಾದ ಪರಿಸ್ಥಿತಿ ಉದ್ಭವವಾಗಿದೆ. ನಾವು ವಿರೋಧ ಪಕ್ಷದವರು ನಾಲ್ಕಾರು ಬೇಡಿಕೆಗಳನ್ನು ಹೇಳಿದ್ದೆವು. ಅದು ಒಂದು ಸದನದ ಸಮಿತಿ ರಚನೆ ಮಾಡಬೇಕು, ವೈಟ್ ಪೇಪರ್ ಬಿಡುಗಡೆ ಮಾಡಬೇಕು, ಇದು ಒಂದು, ಮತ್ತೆ ಈ ಸಾಲ ವಸೂಲಾತಿ ನಿಲ್ಲಿಸಬೇಕೆಂದು, ಮತ್ತೆ ಕನ್‌ವರ್ಷನ್ ಮಾಡಬೇಕು. ಅದಲ್ಲದೆ.....

ಗೊಂದಲ

ಅಧ್ಯಕ್ಷರು :– ಅದಕ್ಕೆ ಉತ್ತರ ಹೇಳಿದ್ದಾರೆ ಬಿಡಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಮಾನ್ಯ ಅಧ್ಯಕ್ಷರೇ, ಇದೇನು ಯಾವುದಾದರೂ ಒಂದನ್ನು ಮಾಡಲಿ. ಧರಣಿ ಮಾಡಲಿ. ಅಥವಾ ಭಾಷಣ ಮಾಡಲಿ.

ಗೊಂದಲ

ಅಧ್ಯಕ್ಷರು :– ನಾನು ಮಾನ್ಯ ಸದಸ್ಯರೆಲ್ಲ ಇಷ್ಟೇ ಕೇಳುವುದು ಮಾನ್ಯ ಸದಸ್ಯರಲ್ಲಿ ನನ್ನದೊಂದು ವಿನಂತಿ ದಯವಿಟ್ಟು ಮುಂದಿನ ಕಾರ್ಯಕ್ರಮ ನಡೆಸಿಕೊಳ್ಳುವುದಕ್ಕೆ ಎಲ್ಲರೂ ತಮ್ಮ ಜಾಗಗಳಿಗೆ ಹೋಗಿ. ಮಾನ್ಯ ಮುದ್ದಹನುಮೇಗೌಡರೇ, ಕಬ್ಬಿನ ಬಗ್ಗೆ ಹೇಳಿ.

ಗೊಂದಲ

(ವಿರೋಧ ಪಕ್ಷದ ಸದಸ್ಯರು ಭಾವಿಯಲ್ಲಿ)

ಅಧ್ಯಕ್ಷರು :– ಮಾನ್ಯ ಹನುಮೇಗೌಡರೇ, ತಾವು ಮಾತನಾಡಿ

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಮಾನ್ಯ ಅಧ್ಯಕ್ಷರೇ, ಏನು ಸ್ವಾಮಿ ಇದು? ರೈತರ ಬಗ್ಗೆ ಕಾಳಜಿ ಇದ್ದರೆ ದಯಮಾಡಿ ಅವರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕು.

ಗೊಂದಲ

ಅಧ್ಯಕ್ಷರು :– 140 ಜನ ಒಂದು ಕಡೆ ಇದ್ದಾರೆ ನೀವು 40 ಜನ ಇರಬಹುದು. ನೀವು 40 ಜನ ಕಾರ್ಯಕಲಾಪಕ್ಕೆ ಅಡ್ಡಿ ಮಾಡುವುದು ನ್ಯಾಯವೇ? ನಾಯ್ಡುರವರೇ, Please hearme ಅವರು 140 ಜನ ಇದ್ದಾರೆ. ನೀವು ಕೆಲವರು ಮಾತ್ರ ಅಡ್ಡಿ ಪಡಿಸುವುದು ನ್ಯಾಯವೇ? ನಿಮಗೆ ಇಷ್ಟವಿಲ್ಲದಿದ್ದರೆ ದಯವಿಟ್ಟು ಲಾಬಿಗೆ ಹೋಗಿ ಕುಳಿತುಕೊಳ್ಳಿ ಫಸ್ಟ್‌ಕ್ಲಾಸ್ ಕಾಫಿ ತರಿಸಿಕೊಡುತ್ತೇನೆ.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :– ಇಂಟರೆಸ್ಟ್ ಮಾಫಿ ಮಾಡಿದ್ದಕ್ಕಾಗಿ ಧಿಕ್ಕಾರ ಎಂದು ಹೇಳಿ.

ಗೊಂದಲ

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) :– ಅವರು ಕಟ್ಟಾ ಸುಬ್ರಹ್ಮಣ್ಯನಾಯ್ಡು ಅಲ್ಲ. ಅವರು ಕಟ್ಟಾ ಬಿಜೆಪಿ.

ಗೊಂದಲ

ಅಧ್ಯಕ್ಷರು :– ನೀವು ಈ ರೀತಿ ಅಡಚಣೆ ಮಾಡುವುದು ಸರಿಯಲ್ಲ. I don't like. ನಿಮಗೆ ಇಷ್ಟವಿಲ್ಲದಿದ್ದರೆ ಲಾಬಿಗೆ ನಡೆಯಿರಿ. ತಿಂಡಿ, ಕಾಫಿ, ಎಲ್ಲಾ ತರಿಸಿಕೊಡುತ್ತೇನೆ. ಲಾಬಿಯಲ್ಲಿ ಕುಳಿತುಕೊಳ್ಳಿ.

ಗೊಂದಲ

ಶ್ರೀ ಬಿ. ಸೋಮಶೇಖರ್ :– 1997–98 ರಲ್ಲಿ ಎರಡು ಜಿಲ್ಲೆಗಳಲ್ಲಿ ಬರಗಾಲ ಆದಾಗ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ಅವರು ಕೇಳಿದ ತಕ್ಷಣವೇ ನಮ್ಮ ಸರ್ಕಾರ ಒಪ್ಪಿಕೊಂಡು ಜಂಟಿ ಸದನ ಸಮಿತಿಯನ್ನು ಮಾಡಿದೆ. ಎರಡೇ ಜಿಲ್ಲೆಯಲ್ಲಿ ಬರಗಾಲ ಇದ್ದದ್ದು.

ಅಧ್ಯಕ್ಷರು :– ತಾವು ಹೇಳಿದ್ದೀರಿ.

ಶ್ರೀ ಬಿ. ಸೋಮಶೇಖರ್ :– ಎರಡು ಜಿಲ್ಲೆಗಳು ಗುಲ್ಬರ್ಗಾ ಮತ್ತು ಬೀದರ್‌ನಲ್ಲಿ ಮಾತ್ರ ಬರಗಾಲ ಇದ್ದದ್ದು. ಇವತ್ತು 137 ತಾಲ್ಲೂಕುಗಳಲ್ಲಿ 20 ಜಿಲ್ಲೆಗಳಲ್ಲಿ ಬರಗಾಲ ಇರುವಾಗ ಇಷ್ಟೊಂದು ಅಕ್ರಮವಾಗಿರುವಾಗ ಸಂಖ್ಯಾಬಲದಿಂದ.....

ಅಧ್ಯಕ್ಷರು :– ದಿವಸಕ್ಕೆ ಮೂರು ಲಕ್ಷ ರೂಪಾಯಿಗಳು ಖರ್ಚಾಗುತ್ತಾ ಇದೆ. ಈ ರೀತಿ ವ್ಯವಹಾರ ಮಾಡಿದರೆ ಹೇಗೆ? ಅವರು ಸರಿಯಾಗಿ ಉತ್ತರವನ್ನು ಹೇಳಿದ್ದಾರಲ್ಲಾ. ಅದರ ಮೇಲೆ ನಿಮ್ಮಿಷ್ಟ ನೀವು 40 ಜನ ಅಡ್ಡಿ ಪಡಿಸುವುದು This is not democracy. ಅವರ ಕಾರ್ಯಕ್ರಮಗಳಿಗೆ ಅಡ್ಡಿಪಡಿಸುವುದು ನ್ಯಾಯವಲ್ಲ.

ಗೊಂದಲ

ಶ್ರೀ ಬಿ. ಸೋಮಶೇಖರ್ :– ಮೂರು ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ ಎಂದರೆ ಸರ್ಕಾರಕ್ಕೆ ಜವಾಬ್ದಾರಿ ಇರಬೇಕು. ವಿರೋಧ ಪಕ್ಷದವರನ್ನು ಸಂಪೂರ್ಣವಾಗಿ ಕಡೆಗಣಿಸಿ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ನೀವು.

ಅಧ್ಯಕ್ಷರು :– ಮುಂದಿನ ಕಾರ್ಯಕ್ರಮ ಮುಂದುವರೆಸುವುದಕ್ಕೆ ನಮಗೆ ದಾರಿ ಕೊಡುತ್ತೀರಾ?

ಗೊಂದಲ

ಅಧ್ಯಕ್ಷರು :– ನಾನೂ ಅಷ್ಟೇ ಸಹಕಾರ ಕೊಟ್ಟಿದ್ದೇನೆ. ನೀವೂ ಕೊಟ್ಟಿದ್ದೀರಿ. ಸರ್ಕಾರದವರೂ ಕೊಟ್ಟಿದ್ದಾರೆ. ಸಹಕಾರವನ್ನು ಯಾರು ಕೊಟ್ಟಿಲ್ಲ? ಎಲ್ಲರೂ ಕೊಟ್ಟಿದ್ದಾರಲ್ಲಾ?

ಶ್ರೀ ಆರಗ ಜ್ಞಾನೇಂದ್ರ :– ಅವರಿಗೆ ಸಂಖ್ಯಾಬಲ ಇದೆ ಎಂದು ಆ ರೀತಿ ಮಾಡುತ್ತಿದ್ದಾರೆ.

ಅಧ್ಯಕ್ಷರು :– ಮೂರು ಮುಕ್ಕಾಲು ವರ್ಷದಿಂದ ಸಂಖ್ಯಾಬಲ ಇವತ್ತೇ ನಾವು ವೋಟಿಂಗ್ ಹಾಕಿದ್ದು. ಯಾವತ್ತೂ ಹಾಕೇ ಇಲ್ಲ. ಮೂರುಮುಕ್ಕಾಲು ವರ್ಷದಿಂದ ವೋಟಿಂಗ್ ಯಾವತ್ತೂ ನಡೆದೇ ಇಲ್ಲ. ಇವತ್ತುಮಾತ್ರ ನಡೆದಿದೆ. ದಯವಿಟ್ಟು ನಿಮ್ಮ ಜಾಗಗಳಿಗೆ ಹೋಗಿ. ನಾನು ನಿಮಗೆ

ಒಂದು ಪ್ರಶ್ನೆ ಕೇಳುತ್ತೇನೆ. ಎಂಎಲ್ಎ ಗಳು ಟಾಸ್ಕ್ಫೋರ್ಸ್ ಕಮಿಟಿ ಛೇರ್ಮನ್ಗಳಾಗಿದ್ದಾರೆ. ಎಲ್ಲಾದರೂ ಸಾರಾಸಗಟು ಭ್ರಷ್ಟಾಚಾರ ಎಂದು ಬಿಟ್ಟರೆ ಹೇಗೆ? ನಾವುಗಳೇ ಇದ್ದೇವಲ್ಲಾ ನನ್ನ ತಾಲ್ಲೂಕಿನಲ್ಲಿ ನಾನೇ ಛೇರ್ಮನ್ ಆಗಿ ಇದ್ದೇನಲ್ಲಾ. 35 ಕೇಸ್ ಬಗ್ಗೆ ಹೇಳಿದ್ದಾರಲ್ಲಾ 35 ಕೇಸ್ನಲ್ಲಿ ನಾವು ವಿಚಾರಣೆ ಮಾಡುತ್ತಿದ್ದೇವೆಂದು ಹೇಳಿದ್ದಾರಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಇಂಪ್ಲಿಮೆಂಟ್ ಮಾಡುವವರೂ ಇವರೇ; ಇವರೇ ಮತ್ತೆ ಅದರ ಮೇಲೆ ಹೋಗಿ ಉಸ್ತುವಾರಿ ಮಾಡುವವರೂ ಇವರೇ ಈಗ ಕಮಿಟಿಯಲ್ಲಿ .

ಗೊಂದಲ

ಅಧ್ಯಕ್ಷರು :– ಕೊನೆಯದಾಗಿ ಕೇಳುತ್ತಿದ್ದೇನೆ. ದಯವಿಟ್ಟು ನನಗೆ ಅಲೋ ಮಾಡಿ. ಮುಂದಿನ ಕಾರ್ಯಕ್ರಮ ಬಹಳ ಇಂಪಾರ್ಟೆಂಟ್. ಕೊಶ್ಚನ್ ಅವರ್ ಇದೆ. ಜೀರೊ ಅವರ್ ಇದೆ. ಬಹಳ ಮುಖ್ಯವಾದುದು ಕಬ್ಬಿನ ಬಗ್ಗೆ ಇದೆ. ಕಲಾಪವನ್ನು ನಡೆಸುವುದಕ್ಕೆ ಇವರು ಬಿಡುವ ಪರಿಸ್ಥಿತಿ ಕಾಣಿಸುತ್ತಿಲ್ಲ. 40 ಜನರು ನೀವು 140 ಜನರನ್ನು ಅಡ್ಡಿಪಡಿಸುವುದು I don't like. ಇಷ್ಟವಿಲ್ಲದಿದ್ದರೆ ಲಾಬಿಯಲ್ಲಿ ಹೋಗಿ ಕುಳಿತುಕೊಳ್ಳಿ.

ಗೊಂದಲ

ಅಧ್ಯಕ್ಷರು :– ಮಾನ್ಯ ಜ್ಞಾನೇಂದ್ರರವರೇ, ನಿಮ್ಮದೇ ಒಂದು ಇದೆಯಲ್ಲಾ ಇಂಪಾರ್ಟೆಂಟ್ ಪ್ರಿವಿಲೇಜ್ ಮೋಷನ್. ಬನ್ನಿ ನೀವು ಮಾಡನಾಡಿ.

ಗೊಂದಲ

ಅಧ್ಯಕ್ಷರು :– ಈಗ ನನಗೆ ಅಲೋ ಮಾಡಿ. ಈ ಸಭೆಯನ್ನು ನಡೆಸುವುದಕ್ಕೆ ನನಗೆ ಅಲೋ ಮಾಡಿ. ನನಗೆ ದಾರಿ ಮಾಡಿಕೊಡಿ. ಅವರು ಸುಮ್ಮನೆ ಕುಳಿತಿದ್ದಾರೆ. ಅವರೇನೂ ಅಡಚಣೆ ಮಾಡುತ್ತಿಲ್ಲ. ನೀವು ಅಡಚಣೆ ಮಾಡುತ್ತಿರುವುದು. ಅವರು ಸುಮ್ಮನೆ ಕುಳಿತಿದ್ದಾರೆ. ಅವರಿಗೆ ಗೊತ್ತಿರುವುದನ್ನು ಹೇಳಿ ಸುಮ್ಮನೆ ಕುಳಿತಿದ್ದಾರೆ. ಇದೇ ಕೊನೆ ತಾವು ಅಲೋ ಮಾಡುತ್ತೀರೋ ಇಲ್ಲವೋ.

ಗೊಂದಲ

ಅಧ್ಯಕ್ಷರು :– ಅವರುಗಳು ಅಲೋ ಮಾಡಿದ್ದಾರಲ್ಲಾ. ನೀವುಗಳೇ ಇಲ್ಲಿಗೆ ಬಂದಿರುವುದು ಅವರು ಬಾವಿಯಲ್ಲಿ ಬಿದ್ದಿದ್ದಾರಾ? ನಿಮಗೆ ಇಷ್ಟವಿಲ್ಲದಿದ್ದರೆ ದಯವಿಟ್ಟು ಹೋಗಿ ಲಾಬಿಯಲ್ಲಿ ಕುಳಿತುಕೊಳ್ಳಿ.

ಶ್ರೀ ಎಸ್. ಸುರೇಶ್ಕುಮಾರ್ :– ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ಒಂದು ಉದ್ದೇಶ ಇಟ್ಟುಕೊಂಡು ಇಲ್ಲಿ ಧರಣಿ ಮಾಡುತ್ತಾರೆ..

ಗೊಂದಲ

ಅಧ್ಯಕ್ಷರು :– ನನಗೆ ಕಲಾಪವನ್ನು ಮುಂದುವರೆಸುವುದಕ್ಕೆ ಆಗುತ್ತಿಲ್ಲ. ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 4–29 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ನಾಳೆ ಬೆಳಿಗ್ಗೆ ಅಂದರೆ ಮಂಗಳವಾರ ದಿ: 22–07–2003 ರಂದು 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)